# ಕರಾವಳಿ ತರಂಗಿಣಿ

ಕಡಲ ಕಿನಾರೆಯಿಂದ ಕೆಂಪು ಕೋಟೆಯವರೆಗೆ..

ಕನ್ನಡ ವಾರಪತ್ರಿಕೆ



**ಸುಭಾಷಿತ:**
ಯಾವಾಗ ಧರ್ಮದ ಅವನತಿ ಆಗುವುದೋ
ಯಾವಾಗ ಅಧರ್ಮದಲ್ಲಿ ಉನ್ನತಿ ಆಗುವುದೋ
ಆಗೆಲ್ಲಾ ಸತ್ಪುರುಷರ ಉದ್ಧಾರಕ್ಕಾಗಿ,
ಅಧರ್ಮಿಯರ ವಿನಾಶಕ್ಕಾಗಿ,
ಧರ್ಮದ ಪುನಃಸ್ಥಾಪನೆಗಾಗಿ
ನಾನು ಮತ್ತೆ ಮತ್ತೆ ಜನ್ಮ ತಾಳುತ್ತೇನೆ..
ಇದು ಪ್ರತಿ ಯುಗದಲ್ಲಿಯೂ ಆಗುತ್ತಲಿದೆ..
ಮುಂದೆಯೂ ಸದಾ ಆಗುತ್ತಲೇ ಇರುವುದು..
**ಭಗವಾನ್ ಶ್ರೀಕೃಷ್ಣ**




REGD NO: 1327299/KARKAN/2018/26532 www.karavalitharangini.com KARAVALI THARANGINI KANNADA Weekly Mangaluru ದಿನಾಂಕ: 28-02-2025 to 06-03-2025 ಬೆಲೆ: 7-00 ಸಂಪುಟ–4 ಸಂಚಿಕೆ–36 ಪುಟಗಳು–6



ಕ್ಷಣ ಕ್ಷಣದ ಸುದ್ದಿಗಳಿಗಾಗಿ
ಕರಾವಳಿ ತರಂಗಿಣಿ
ಪತ್ರಿಕಾ ಬಳಗದಿಂದ
ಅಂತರ್ಜಾಲ ಮಾಧ್ಯಮ
www.karavalitharangini.com
ಕರಾವಳಿ ತರಂಗಿಣಿ
ಮಂಗಳೂರು




ಬೇಸಿಗೆಯ ಕಾವು ಜನರನ್ನು ಬಸವಳಿಯುವಂತೆ ಮಾಡುತ್ತದೆ. ಅದರಲ್ಲೂ ರಾಜ್ಯದ ಕರಾವಳಿಯಲ್ಲಿ ಬಿರು ಬಿಸಿಲಿನಿಂದ ಜನ ಈಗಲೇ ತತ್ತರಿಸಿ ಹೋಗುತ್ತಿದ್ದಾರೆ. ಹೀಗಿರುವಾಗ ಪ್ರಾಣಿ ಪಕ್ಷಿಗಳ ಪರಿ ಹೇಗಿರಬಹುದು ಎಂದು ಊಹಿಸಲೂ ಅಸಾಧ್ಯ. ಇಂತಹ ಸಂದರ್ಭದಲ್ಲಿ ಮನುಷ್ಯರಾಗಿ ನಾವು ನಮ್ಮ ಮನೆಯ ಅಕ್ಕ ಪಕ್ಕದಲ್ಲಿ ಪಾತ್ರೆಯಲ್ಲಿ ನೀರು, ಸ್ವಲ್ಪ ಆಹಾರ ಇಟ್ಟರೆ, ಮೂಕ ಪ್ರಾಣಿ ಪಕ್ಷಿಗಳ ಬಿಸಿಲ ಧಗೆಯ ಜೊತೆಗೆ ಹೊಟ್ಟೆಯ ಧಗೆಯನ್ನು ಕೂಡ ಆರಿಸಿದಂತಾಗುತ್ತದೆ.

## ಎಂಎನ್‌ಆರ್ ಯಾರಿಗೂ ಅರ್ಥ ಆಗಿಲ್ಲ – ಕೋಟ



**ಮಂಗಳೂರು:** ಭೀಷ್ಮ ಶ್ರೀ ಕೃಷ್ಣನಿಗೆ ಹೇಳುತ್ತಾನೆ "ನೀನು ಯಾರನ್ನು ಬೆನ್ನಟ್ಟಿದರು ಅವರು ಸೋಲುತ್ತಾರೆ. ಹಾಗೇ ಬೇರೆಯವರು ನಿನ್ನನ್ನು ಬೆನ್ನಟ್ಟಿದರೂ ಅವರೇ ಸೋಲುತ್ತಾರೆ ನೀನು ಯಾರಿಗೂ ಅರ್ಥವಾಗುವುದಿಲ್ಲ" ಎನ್ನುತ್ತಾನೆ ಹಾಗೆ ಎಂ ಎನ್ ರಾಜೇಂದ್ರ ಕುಮಾರ್ ಸಹಕಾರಿ ಕ್ಷೇತ್ರದಲ್ಲಿ ನಮಗೆ ಯಾರಿಗೂ ಅರ್ಥ ಆಗಿಲ್ಲ. ಹಾಗಂತ ಅವರನ್ನು ಕಾಲೆಳೆಯದೇ ಬಿಟ್ಟಿಲ್ಲ. ಆದರೆ ನಿಮ್ಮ ಕಾಲು ಗಟ್ಟಿ ಇದೆ ಅಂತ ಗೊತ್ತಾದ್ಮೇಲೆ ಅಲ್ಲೇ ಬಿಟ್ಟಿದ್ದೇವೆ ಎಂದು ಕೋಟ ಶ್ರೀನಿವಾಸ್ ಪೂಜಾರಿ ನಗೆ ಚಟಾಕಿ ಹಾರಿಸಿದರು. **3ನೇ ಪುಟಕ್ಕೆ**

## ಇಚ್ಛಾಶಕ್ತಿ ಇದ್ದರೆ ಸಾಧನೆ ಸಾಧ್ಯ –ಡಾ. ಯು. ಕೆ. ಮೋನು



**ಮಂಗಳೂರು:** ನಮ್ಮ ದೇಶದಲ್ಲಿ ಸಾಧನೆ ಮಾಡಲು ವಿಪುಲ ಅವಕಾಶವಿದೆ. ಎಲ್ಲ ವರ್ಗದ ಜನರಿಗೆ ಇಲ್ಲಿ ಬೆಳೆಯಲು ಅವಕಾಶವಿದೆ. ಆದರೆ ಇಚ್ಛಾಶಕ್ತಿ ಬೇಕು. ಹಾಗಿದ್ದರೆ ಮಾತ್ರ ಜೀವನದಲ್ಲಿ ಸಾಧನೆ ಮಾಡಲು ಸಾಧ್ಯ ಎಂದು ಕಣಚೂರು ಸಮೂಹ ಸಂಸ್ಥೆಗಳ ಸ್ಥಾಪಕ ಅಧ್ಯಕ್ಷ ಡಾ.ಯು.ಕೆ.ಮೋನು ಹೇಳಿದರು. ಮಂಗಳೂರು ಪ್ರೆಸ್‌ಕ್ಲಬ್ ವತಿಯಿಂದ ಪ್ರೆಸ್‌ಕ್ಲಬ್ ಗೌರವ ಅತಿಥಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಕೆಲಸ ಮಾಡಬೇಕೆಂಬ ಛಲವಿತ್ತು. ಹಾಗಾಗಿ ವಿದ್ಯಾಭ್ಯಾಸ ಕಡಿಮೆ ಇದ್ದರೂ ಸಾಧನೆ ಮಾಡಲು ಸಾಧ್ಯವಾಯಿತು ಎಂದರು. ಕೆಲಸ ಮಾಡಬೇಕು, ಸಂಬಳ ಪಡೆಯಬೇಕೆಂಬ **3ನೇ ಪುಟಕ್ಕೆ**

## ಕೈದಿಗಳಿಗೆ ಚಾ ಪುಡಿ ನೀಡುವ ಯೋಗ್ಯತೆ ಸರಕಾರಕ್ಕಿಲ್ಲವೇ?



**ಮಂಗಳೂರು:** ಜೈಲಿನೊಳಗೆ ಎಸೆದ ಪೊಟ್ಟಣದಲ್ಲಿ ಚಾ ಪುಡಿ ಇತ್ತು ಎಂದು ಜೈಲಿನ ಅಧಿಕಾರಿಗಳು ಹೇಳಿಕೆ ನೀಡಿದ್ದಾರೆ. ಜೈಲಿನೊಳಗಿರುವ ಕೈದಿಗಳಿಗೆ ಚಾ ಪುಡಿ ನೀಡುವಷ್ಟು ಯೋಗ್ಯತೆ ರಾಜ್ಯ ಸರಕಾರಕ್ಕೆ ಇಲ್ಲವೇ? ಜೈಲಿನೊಳಗೆ ಮಾದಕ ವಸ್ತುಗಳು ಪೂರೈಕೆಯಾಗುತ್ತಿರುವುದು ಹೊಸ ವಿಷಯವಲ್ಲ. ಮಾದಕ ವಸ್ತುಗಳು ಎಲ್ಲಿಂದ, ಹೇಗೆ ಪೂರೈಕೆ ಆಗುತ್ತಿವೆ ಎಂಬುದನ್ನು ಪತ್ತೆ ಮಾಡಬೇಕು ಎಂದು ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾ ಯುವ ಮೋರ್ಚಾ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ನಂದನ್ ಮಲ್ಯ ಅವರು **3ನೇ ಪುಟಕ್ಕೆ**







# ಸಂಪಾದಕೀಯ

ಕರಾವಳಿ ತರಂಗಿಣಿ

## ದೂರವಾಗಲಿ ವೃದ್ಧಾಶ್ರಮದ ಸಂಸ್ಕೃತಿ

– ಲಲಿತಶ್ರೀ ಪ್ರೀತಮ್ ರೈ



ಅದೊಂದು ಕಾಲವಿತ್ತು ಮನೆ ತುಂಬಾ ಮಕ್ಕಳು ಹಿರಿಯರಿಂದ ತುಂಬಿ ತುಳುಕುತಿತ್ತು. ಹಬ್ಬ ಹರಿದಿನಗಳೆಂದರೆ ಅದೇನೋ ಸಂಭ್ರಮ. ಬಡತನವಿದ್ದರೂ ಮನೆಯಲ್ಲಿ ನೆಮ್ಮದಿಯ ಸಿರಿತನವಿತ್ತು. ಅಜ್ಜ ಅಜ್ಜಿ, ಅಪ್ಪ ಅಮ್ಮ, ಮಾವ ಅತ್ತೆ ಮಾವ, ದೊಡ್ಡಮ್ಮ ದೊಡ್ಡಪ್ಪ ಹೀಗೇ ಎಲ್ಲರೂ ಒಂದಾಗಿ ಒಂದೇ ಸೂರಿನಡಿಯಲ್ಲಿ ಸುಖವಾಗಿ ಬದುಕುತಿದ್ದರು. ಚಿಕ್ಕವರು ದೊಡ್ಡವರೆಂಬ ಕೀಳರಿಮೆಯಿಲ್ಲದೇ ಎಲ್ಲರೂ ಒಂದೇ ಎನ್ನುವ ಭಾವನೆಯಿಂದ ಜೀವನದಲ್ಲಿ ಏನೇ ಕಷ್ಟಸುಖಗಳು ಬಂದರೂ ನಮ್ಮ ಕುಟುಂಬವು ನಮ್ಮೊಂದಿಗಿರುತ್ತದೆ ಎನ್ನುವ ಭಾವನೆಯಿತ್ತು. ನಮ್ಮತನವನ್ನು ಎತ್ತಿ ತೋರುವುದೇ ಇಂತಹ ಸಂಬಂಧಗಳು. ಅಮ್ಮನ ಕೈ ತುತ್ತು, ಅಪ್ಪನ ಕಿವಿ ಮಾತು, ಅಜ್ಜಿಯ ಕಾಗೆ ಗುಬ್ಬಕ್ಕನ ಕತೆ, ಅಜ್ಜನ ಜವಾಬ್ದಾರಿ, ಮಕ್ಕಳ ಆಟ ಪಾಠ ಇಂದು ಎಲ್ಲಿದೆ ಅಂತಹ ನೆಮ್ಮದಿಯ ಕ್ಷಣಗಳು. ಇಂದಿನ ಪೀಳಿಗೆಗೆ ಇಂತಹ ಸುಖದ ಅನುಭವವಾದರು ಸಿಗಲು ಸಾಧ್ಯವೇ? ಆಧುನಿಕತೆಯ ಹೆಸರಿನಲ್ಲಿ ನಮ್ಮ ಸಮಾಜ ಯಾವ ದಿಕ್ಕಿನತ್ತ ಸಾಗುತ್ತಿದೆ? ಎಂದೆಲ್ಲಾ ಯೋಚಿಸಲು ಶುರು ಮಾಡಿದರೆ ಭಯವಾಗುತ್ತದೆ. ಇಂದು ಹಿರಿಯರು ಎನ್ನುವ ಭಯ ಭಕ್ತಿಯಿಲ್ಲ, ಕಿರಿಯರೆನ್ನುವ ಪ್ರೀತಿ ಮಮಕಾರವಿಲ್ಲ. ಎಲ್ಲರೂ ಸ್ವತಂತ್ರರು ಅವರ ಸ್ವತಂತ್ರತ್ರೆಗೆ ಅಂಕೆಯಿಲ್ಲ. ಇಂದು ಮದುವೆಯೆಂದರೆ ವ್ಯಾಪಾರೀಕರಣವಾಗುತ್ತಿದೆ. ಅತ್ತೆ ಮಾವಂದಿರಿಗೆ ಕೈತುಂಬಾ ಸಂಪತ್ತು ಹೊತ್ತು ತರುವ ಸೊಸೆ ಬೇಕು, ಅವಳು ಹೊತ್ತು ತರುವ ಮೂಟೆಯ ಆಸೆಯಲ್ಲಿ ಮಗನನ್ನು ಮಾರುತ್ತಿರುವ ಪರಿವೆಯೇ ಇಲ್ಲದೆ ಮುಂದೆ ತನ್ನ ಇಳಿ ವಯಸ್ಸಿನಲ್ಲಿ ಒಂಟಿಯಾಗಿ ಬದುಕು ಸಾಗಿಸುತ್ತಿರುವ ಎಷ್ಟೋ ವೃದ್ದರನ್ನು ನಾವು ನೋಡುತ್ತೇವೆ. ಇನ್ನೂ ಕೆಲವು ಅಪ್ಪ ಅಮ್ಮ ತನ್ನ ಹೆಣ್ಣು ಮಕ್ಕಳಿಗಾಗಿ ಗಂಡು ಮಕ್ಕಳನ್ನು ಕಡೆಗಣಿಸಿ ಮುಂದೆ ತನ್ನ ಇಳಿವಯಸ್ಸಿನಲ್ಲಿ ಅತ್ತ ಗಂಡು ಮಕ್ಕಳೂ ಇಲ್ಲದೇ ಇನ್ನೂ ಹೆಣ್ಣು ಮಕ್ಕಳೂ ಇಲ್ಲದೇ ಮಕ್ಕಳಿಗಾಗಿ ಕನವರಿಸುವವರನ್ನೂ ನಾವು ನೋಡುತ್ತೇವೆ. ಇಲ್ಲಿ ಯಾರನ್ನೂ ತಪ್ಪಿತಸ್ಥರು ಎನ್ನುವ ಹಾಗಿಲ್ಲ. ಇಂದು ಹೆಣ್ಣು ಮದುವೆಯಾಗಿ ಇನ್ನೊಂದು ಮನೆಗೆ ಹೊರಡುತ್ತಾಳೆ ಅಂತ ತಿಳಿದರೆ ಸಾಕು ಕೆಲವರು ಮೊದಲು ಕೊಡುವ ಬಿಟ್ಟಿ ಸಲಹೆ "ಆದಷ್ಟು ಬೇಗ ಬೇರೆ ಮನೆ ಮಾಡು" ಈಗಿನಿಂದಲೇ ನಿನ್ನ ಗಂಡನಿಗೆ ತಿಳಿಸಿರು, ಇಲ್ಲವಾದರೆ ಮುಂದೆ ಕಷ್ಟವಾಗುತ್ತದೆ. ಎಂತಹ ಮನಸ್ಥಿತಿ ನೋಡಿ. ಆ ಹೆಣ್ಣು ಮಗಳು ಈಗ ತಾನೆ ಇನ್ನೊಂದು ಮನೆಯನ್ನು ಬೆಳಗಲು ಹೊರಟವಳು, ಇಂತಹ ಹೆಣ್ಣಿಗೆ ಮೊದಲ ಪಾಠ ಆ ಮನೆಯ ದೀಪ ಆರಿಸುವ ಬಗ್ಗೆ. ಯಾಕೇ ಇಂತಹ ಕೆಟ್ಟ ಆಲೋಚನೆ ನಮ್ಮ ಜನಕ್ಕೆ ಎನ್ನುವುದೇ ತಿಳಿಯುವುದಿಲ್ಲ. ಇನ್ನು ಕೆಲವು ತಾಯಿಯಂದಿರಿಗಂತೂ ತನ್ನ ಮಗಳ ಮದುವೆ ಅಂದ ಕೂಡಲೇ ಬೇರೆ ಮನೆ ಮಾಡಿಸುವ ಯೋಚನೆ ಬಂದು ಬಿಡುತ್ತದೆ. ಅದೇ ತನಗೊಬ್ಬ ಮಗನಿದ್ದು ಅವನೇನಾದರೂ ಮದುವೆಯಾಗಿ ಇಂತಹ ಯೋಚನೆ ಇರುವ ಹೆಣ್ಣು ಮಗಳು ಬಂದರೆ ಹೇಗಿರಬಹುದು ಎನ್ನುವ ಸಾಮಾನ್ಯ ಪ್ರಜ್ಞೆಯೂ ಇರುವುದಿಲ್ಲ ನೋಡಿ. ಇನ್ನೂ ಕೆಲವು ಹೆಣ್ಣು ಮಕ್ಕಳ ಯೋಚನೆ ಹೇಗಿರುತ್ತದೆ ಎಂದರೆ ಗಂಡನ ತಂದೆ ತಾಯಿ ಅವರ ಜೊತೆಯಲ್ಲಿ ಇರುವುದು, ಹಾಗಿರಲಿ ಅವರ ಜೊತೆ ಮಾತಾನಾಡುವುದನ್ನೂ ಕೂಡ ಸಹಿಸಲಾರರು. ಒಂದು ಮಗುವನ್ನು ಹೊತ್ತ ಹೆತ್ತವರಿಗೆ ಅದೆಷ್ಟು ಪ್ರೀತಿ ಇರುವುದಿಲ್ಲ ನೀವೇ ಹೇಳಿ. ಹಾಗೇ ಮಗನಾದವನಿಗೂ ತನ್ನ ತಂದೆ ತಾಯಿಯ ಜೊತೆ ಬೆರೆಯಬೇಕೆನ್ನುವ ಆಸೆ ಇರುವುದಿಲ್ಲವೇ? ಮಗನಾದವನು ಅದೆಷ್ಟು ನೋವುಗಳನ್ನು ಎದೆಯಲ್ಲಿ ಮುಚ್ಚಿಟ್ಟುಕೊಂಡಿರುವುದಿಲ್ಲ. ಹಾಗಂತ ಎಲ್ಲಾ ಗಂಡು ಮಕ್ಕಳು ಒಳ್ಳೆಯವರಂತ ನಾನು ಹೇಳುವುದಿಲ್ಲ. ತನ್ನ ಹೆಂಡತಿಯ ಪ್ರೀತಿಯ ಸೆಳೆಯಲ್ಲಿ ಹೆತ್ತವರನ್ನು ಬೀದಿಗಟ್ಟಿದ ಎಷ್ಟೋ ಮಕ್ಕಳಿದ್ದಾರೆ. ನಾಳೆ ಇವರ ಮಕ್ಕಳು ಅದೇ ರೀತಿ ಮಾಡಿ ಮಾಡಿದಾಗ ಅದರ ನೋವು ತಿಳಿಯುತ್ತದೆ ಅಷ್ಟೆ. ಇಷ್ಟೆಲ್ಲಾ ಹೇಳಲು ಕಾರಣ ನಾನು ಬೇಟಿಯಾದ ಒಂಬತ್ತು ಮಕ್ಕಳ ತಾಯಿ ಎಪ್ಪತ್ತರ ಅಜ್ಜಿ. ಈ ಅಜ್ಜಿಗೆ ಐದು ಹೆಣ್ಣು ಮಕ್ಕಳು ನಾಲ್ಕು ಗಂಡು ಮಕ್ಕಳಂತೆ, ಆದರೆ ಇವತ್ತು ಅಜ್ಜಿಯನ್ನು ನೋಡಿಕೊಳ್ಳಲು ಯಾರೂ ಸಿದ್ದರಿಲ್ಲ. ಅಜ್ಜಿಯ ಗಂಡನೂ ಇಹಲೋಕವನ್ನು ತ್ಯಜಿಸಿದ್ದಾರೆ. ಈಗ ಅಜ್ಜಿ ಆಸರೆಗಾಗಿ ಮಕ್ಕಳನ್ನು ಎದುರು ನೋಡುತ್ತಿದ್ದಾರೆ. ಈ ಅಜ್ಜಿ ತನ್ನ ಒಂಬತ್ತು ಮಕ್ಕಳನ್ನು ಹೊತ್ತು ಹೆತ್ತು ಸಾಕಿ ಸಲಹಬೇಕಾದರೆ ತನ್ನ ದೇಹದ ರಕ್ತವನ್ನೇ ಬಸಿದಿದ್ದಾರೆ. ಆದರೆ ಇಂದು ಮಕ್ಕಳು ತನ್ನ ತಾಯಿಗೆ ಆಸರೆ ಕೊಡಲು ಸಿದ್ದರಿಲ್ಲ. ಇಂದು ವೃದ್ಧಾಶ್ರಮಗಳ ಸಂಖ್ಯೆ ಹೆಚ್ಚಾಗುತ್ತಿರುವುದನ್ನು ನೋಡಿದರೆ ಮುಂದೆ ನಿವೃತಿಯ ಬಳಿಕ ಎಲ್ಲಾ ತಂದೆ ತಾಯಿಗಳು ವೃದ್ಧಾಶ್ರಮವನ್ನೇ ಅವಲಂಬಿಸಬೇಕಾಗುವುದೋ ಎನೋ ಎನ್ನುವ ಭಯ ಮೂಡುತ್ತದೆ. ಏಕೆಂದರೆ ಇಂದು ಗಂಡ ಹೆಂಡತಿ ಇಬ್ಬರೂ ತನ್ನ ಕೆಲಸ ಕಾರ್ಯಗಳಲ್ಲಿ ನಿರತರಾಗಿ ಮಕ್ಕಳನ್ನು ಕಿಂಡರ್‌ಕಾರ್ಟನ್‌ಗಳಲ್ಲಿ ಸೇರಿಸಿ, ಮುಂದೆ ವಸತಿ ಶಾಲೆಗಳಲ್ಲಿ ಓದಿಸಿ ಅವರ ಪಾಡಿಗೆ ಅವರು ಎಲ್ಲೋ ದೂರದ ದೇಶಗಳಲ್ಲಿ ಬದುಕುತ್ತಿರುತ್ತಾರೆ. ಇನ್ನೂ ತಂದೆ ತಾಯಿ ಜೊತೆಯಲ್ಲಿರುವಷ್ಟು ದಿನ ತೊಂದರೆಯಿಲ್ಲ ಆದರೆ ವಿಧಿ ಯಾರಿಗೂ ತಿಳಿದಿಲ್ಲ. ಇಬ್ಬರಲ್ಲಿ ಒಬ್ಬರು ದೂರವಾದರೂ ಸೂತ್ರವಿಲ್ಲದ ಗಾಳಿಪಟವಾಗಿ ಬಿಡುತ್ತದೆ ಬದುಕು. ಇಂತಹ ಎಷ್ಟೋ ವಯೋ ವೃದ್ದರು ನಮ್ಮ ಪಕ್ಕದಲ್ಲಿ ಕಾಣ ಸಿಗುತ್ತಾರೆ. ಅವರು ತಮ್ಮ ನೋವನ್ನು ತೋರಿಸದೆ ತಮ್ಮ ಪಾಡಿಗೆ ತಾವಿದ್ದರೂ ಮಕ್ಕಳು ಅವರ ಪರಿಸ್ಥಿತಿಯನ್ನು ಅರ್ಥೈಸಿಕೊಂಡು ಅವರಿಗೆ ಆಸರೆಯಾಗಿ ಬದುಕಿದರೆ ನಮ್ಮ ಮುಂದಿನ ಪೀಳಿಗೆ ನಮ್ಮೊಡನೆ ಅದೇ ಭಾಂಧವ್ಯದಿಂದ ಬದುಕಲು ನಾವು ದಾರಿ ತೋರಿದಂತಾಗುತ್ತದೆ...

# ಸಂಪ್ರದಾಯ

## ಪುಷ್ಯ ಮಾಸ



ಹಿಂದೂ ಪಂಚಾಂಗದ ಪ್ರಕಾರ 10ನೇ ಮಾಸವಾಗಿರುವ ಪುಷ್ಯ ಮಾಸದಲ್ಲಿ ಸೂರ್ಯ ದೇವರ ಆರಾಧನೆಗೆ ವಿಶೇಷ ಮಹತ್ವವಿದೆ. ಈ ಮಾಸದಲ್ಲಿ ಸೂರ್ಯ ದೇವರನ್ನು ಭಗ ಎಂಬ ಹೆಸರಿನಲ್ಲಿ ಪೂಜಿಸಬೇಕು. ಭಗ ಎಂಬ ಹೆಸರನ್ನು ದೇವರ ರೂಪವೆಂದು ಪರಿಗಣಿಸಲಾಗಿದೆ. ಪುಷ್ಯ ಮಾಸವನ್ನು ಪೂರ್ವಜರ ವಿಮೋಚನೆಯ ತಿಂಗಳು ಎಂದೂ ಕರೆಯುತ್ತಾರೆ. ವಾಸ್ತವವಾಗಿ ಪುಷ್ಯಮಾಸದಲ್ಲಿ ಸೂರ್ಯನು ಧನು ರಾಶಿಯನ್ನು ಪ್ರವೇಶಿಸುತ್ತಾನೆ. ಪುಷ್ಯ ಮಾಸದ ಅಮವಾಸ್ಯೆಯು ಪಿತೃ ದೋಷವನ್ನು ಮತ್ತು ಕಾಳ ಸರ್ಪದೋಷವನ್ನು ಹೋಗಲಾಡಿಸಲು ಮಂಗಳಕರವೆಂದು ಪರಿಗಣಿಸಲಾಗಿದೆ. ಪುಷ್ಯ ಮಾಸವು ಭಗವಾನ್ ಶ್ರೀಮನ್ ನಾರಾಯಣನಿಗೆ ಅರ್ಪಿತವಾದ ಮಾಸವಾಗಿದೆ. ಪುಷ್ಯ ಮಾಸವನ್ನು ಶೂನ್ಯ ಮಾಸವೆಂದು ಪರಿಗಣಿಸಲಾಗುವುದರಿಂದ ಈ ಮಾಸದಲ್ಲಿ, ಮದುವೆಗಳನ್ನು, ಗೃಹ ಪ್ರವೇಶವನ್ನು ಅಥವಾ ಇನ್ನಿತರ ಮಂಗಳಕಾರ್ಯಕ್ರಮಗಳನ್ನು ಮನೆಯಲ್ಲಿ ಇಟ್ಟುಕೊಳ್ಳುವುದಿಲ್ಲ. ಪೂಜೆ ಪುನಸ್ಕಾರಗಳಿಗೆ ಉತ್ತಮವಾದ ಉತ್ತಮವಾದ ಮಾಸವಾಗಿದೆ. ಪುಷ್ಯ ಮಾಸದಲ್ಲಿ ಪಿಂಡದಾನ ಮಾಡಿದ ಪೂರ್ವಜರ ಆತ್ಮವು ತಕ್ಷಣವೇ ವೈಕುಂಠ ಲೋಕವನ್ನು ಸೇರುತ್ತದೆ ಎಂದು ಧಾರ್ಮಿಕ ಗ್ರಂಥಗಳಲ್ಲಿ ಹೇಳಲಾಗಿದೆ. ಈ ಮಾಸದಲ್ಲಿ ಪ್ರತಿ ಭಾನುವಾರದಂದು ಉಪವಾಸವಿದ್ದು, ಎಳ್ಳು ಮತ್ತು ಅಕ್ಕಿ ನೈವೇದ್ಯ ಮಾಡುವುದರಿಂದ ಆ ವ್ಯಕ್ತಿಯು ತೇಜಸ್ವಿಯಾಗುತ್ತಾನೆ. ಪಿತೃಗಳಿಗೆ ಸಂತೋಷವನ್ನು ನೀಡಲು, ಪಿತೃ ದೋಷದಿಂದ ಮುಕ್ತಿಯನ್ನು ಹೊಂದಲು ಈ ಪುಷ್ಯಮಾಸವು ಉಪಯುಕ್ತಕಾರಿ. ಇನ್ನು ಪುಷ್ಯ ಮಾಸದಲ್ಲಿ ಬರುವ ಪೌರ್ಣಮಿ ಅಥವಾ ಪುಷ್ಯ ಪೌರ್ಣಮಿ ದಿನದಂದು ವೇದಗಳನ್ನು ಅಧ್ಯಯನ ಮಾಡಲು ಬಯಸುವವರಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಹೊಂದಿದೆ. ಬೃಹಸ್ಪತಿ ಅಥವಾ ಗುರುವನ್ನು ಈ ಮಾಸದ ನಕ್ಷತ್ರ ದೇವತೆಯೆಂದು ಪರಿಗಣಿಸಲಾಗುತ್ತದೆ. ಪುಷ್ಯ ಮಾಸದ ಅಮಾವಾಸ್ಯೆಯ ದಿನದಂದು ವಸ್ತ್ರದಾನ ಮತ್ತು ಎಳ್ಳು ದಾನ ಮಾಡುವುದರಿಂದ ಸಾಡೇಸಾತಿ ಶನಿ ದೋಷ ಸೇರಿದಂತೆ ಶನಿಗೆ ಸಂಬಂಧಿಸಿದ ಎಲ್ಲಾ ದೋಷಗಳು ದೂರಾಗುತ್ತದೆ ಎಂಬ ನಂಬಿಕೆಯಿದೆ

# ವೈದ್ಯೋನಾರಾಯಣೋ ಹರಿಃ

## ಎಳನೀರು




ಭಾರತದ ಚರಿತ್ರೆಯಲ್ಲಿ ತೆಂಗಿಗೆ ಪ್ರಮುಖ ಸ್ಥಾನವಿದ್ದು ನಮ್ಮ ಸಂಸ್ಕೃತಿಯಲ್ಲಿ ಹಾಸು ಹೊಕ್ಕಾಗಿದೆ. ಧಾರ್ಮಿಕವಾಗಿಯೂ ತೆಂಗಿನ ಮರಕ್ಕೆ ಮಹತ್ವವಿದೆ. ಈ ತೆಂಗಿನ ಮರವನ್ನು ಕಲ್ಪವೃಕ್ಷ ಎಂದು ಜಾನಪದರು ಕರೆಯುವುದುಂಟು. ಇದಕ್ಕೆ ಕಾರಣ ತೆಂಗಿನ ಮರದ ಎಲ್ಲಾ ಭಾಗಗಳು ಉಪಯೋಗಕ್ಕೆ ಬರುವುದೇ ಇದಕ್ಕೆ ಕಾರಣ. ಅದರಲ್ಲಿ ಎಳನೀರೂ ಒಂದು. ಎಳನೀರಿನಲ್ಲಿ ಕಡಿಮೆ ಕ್ಯಾಲರಿ ಇದ್ದು, ನೈಸರ್ಗಿಕ ಕಿಣ್ವಗಳು, ಖನಿಜಾಂಶಗಳಾಗಿರುವಂತಹ ಪೊಟಾಶಿಯಂ ಕೂಡ ಇದರಲ್ಲಿದೆ. ವ್ಯಾಯಾಮದ ಬಳಿಕ ಎಳನೀರು ಕುಡಿದರೆ ಅದರಿಂದ ದೇಹವು ಕಳೆದುಕೊಂಡಿರುವ ಎಲೆಕ್ಟ್ರೋಲೈಟ್ ಮರಳಿ ಪಡೆಯಲು ಸಹಕಾರಿ. ಮಲಗುವ ಮೊದಲು ಒಂದು ಲೋಟ ಎಳನೀರು ಕುಡಿದರೆ ಒತ್ತಡ ನಿವಾರಣೆ ಆಗುವುದು ಮತ್ತು ಮನಸ್ಸು ಶಾಂತವಾಗುವುದು. ಎಳನೀರಿನಲ್ಲಿ ಸಾಕಷ್ಟು ಪ್ರಮಾಣದಲ್ಲಿ ವಿಟಮಿನ್ ಸಿ ಇರುವುದರಿಂದ ಇದು ದೇಹದಲ್ಲಿ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಎಳನೀರಿನಲ್ಲಿ ಮೆಗ್ನೀಶಿಯಂ ಪ್ರಮಾಣ ಹೇರಳವಾಗಿರುವುದರಿಂದ ದೇಹದಲ್ಲಿ ಇನ್ಸುಲಿನ್ ಪ್ರಮಾಣವನ್ನು ಹೆಚ್ಚಿಸಿ ಸಕ್ಕರೆ ಪ್ರಮಾಣ ಕಡಿಮೆ ಮಾಡುತ್ತದೆ. ಎಳನೀರು ಆರೋಗ್ಯದ ಅಮೃತವೂ ಹೌದು. ಇದರಲ್ಲಿ ವಿಟಮಿನ್ ಮತ್ತು ಎನರ್ಜಿ ಪೋಷಕಾಂಶಗಳು ಅಧಿಕವಾಗಿದ್ದು, ತೂಕ ಇಳಿಸಲು ಸಹಾಯ ಮಾಡುತ್ತದೆ. ಎಳನೀರಿನಲ್ಲಿ ಸಾಕಷ್ಟು ಪೊಟ್ಯಾಶಿಯಂ ಅಂಶ ಇರುವುದರಿಂದ ರಕ್ತದೊತ್ತಡ ಕಡಿಮೆ ಮಾಡುವುದರೊಂದಿಗೆ ರಕ್ತಹೆಪ್ಪುಗಟ್ಟುವುದನ್ನು ತಪ್ಪಿಸುತ್ತದೆ. ಎಳನೀರು ಚರ್ಮಕ್ಕೆ ಕಾಂತಿ ನೀಡುವುದರೊಂದಿಗೆ ಚರ್ಮದಲ್ಲಿನ ಹೆಚ್ಚಿನ ಎಣ್ಣೆಯ ಅಂಶವನ್ನು ಕಡಿಮೆ ಮಾಡುವುದರಿಂದ ಮುಖದ ಸುಕ್ಕು ಕಡಿಮೆ ಮಾಡುತ್ತದೆ. ಎಳನೀರಿನಲ್ಲಿ ಒಮೆಗಾ 3 ಹೇರಳವಾಗಿ ಇರುವುದರಿಂದ ಗರ್ಭದಲ್ಲಿನ ಮಗುವಿನ ಮೆದುಳಿನ ಬೆಳವಣಿಗೆ ಚುರುಕಾಗಲು ಗರ್ಭಿಣಿಯರು ಎಳನೀರು ಕುಡಿಯುವುದು ಒಳ್ಳೆಯದು. ಎಳನೀರಿನಲ್ಲಿ ಗ್ಲುಕೋಸ್ ಪ್ರಮಾಣ ಹೇರಳವಾಗಿರುವುದರಿಂದ ದೇಹಾಯಾಸವನ್ನು ನಿವಾರಿಸಿ ದೇಹಕ್ಕೆ ಹೊಸ ಚೈತನ್ಯ ನೀಡುತ್ತದೆ. ಎಳನೀರಿನಲ್ಲಿ ಫೈಬರ್ ಅಂಶ ಜಾಸ್ತಿಯಿದ್ದು, ಕೊಬ್ಬಿನಾಂಶ ಕಡಿಮೆ ಇರುವುದರಿಂದ ಹಸಿವು ಕಡಿಮೆ ಆಗಿ ಬೊಜ್ಜು ಬೆಳೆಯುವುದನ್ನು ನಿಯಂತ್ರಿಸುತ್ತದೆ.

# ಕ್ಷೇತ್ರದರ್ಶನ

ತುಳುನಾಡು ತನ್ನ ವಿಬಿನ್ನ ಆಚರಣೆ, ಸಂಸ್ಕೃತಿಗಳಿಂದ ಎಲ್ಲರನ್ನೂ ಸೆಳೆಯುತ್ತದೆ. ಈ ನೆಲದಲ್ಲಿ ದೇವರ ಮೇಲೆ ಎಷ್ಟು ಭಕ್ತಿ ಇದೆಯೋ ಅಷ್ಟೇ ಭಕ್ತಿ ದೈವಗಳ ಮೇಲಿದೆ. ಮಂಗಳೂರಿನಿಂದ 15 ಕಿ.ಮಿ ದೂರದಲ್ಲಿರುವ ಪ್ರಕೃತಿಯ ಮಡಿಲಿನ ಸುಂದರ ತಾಣ ಎಕ್ಕಾರಿನಲ್ಲಿ ಕೊಡಮಣಿತ್ತಾಯ ದೈವಸ್ಥಾನವಿದೆ. ಮಂಗಳೂರಿನಿಂದ ಬಜಪೆ ಮಾರ್ಗವಾಗಿ ಕಟೀಲಿಗೆ ಹೋಗುವಾಗ ಎಡಭಾಗದಲ್ಲಿ ಇದರ ಸ್ವಾಗತ ಗೋಪುರ ಕಾಣುತ್ತದೆ. ಪುರಾಣಗಳ ಪ್ರಕಾರ ದೈವಭಕ್ತನಾದ ತಿಬಾರ (ಶಿಬರೂರು) ಗುತ್ತಿನ ತಿಮ್ಮತ್ತಿ ಕರಿವಾಳ್ ಹಾಗೂ ಎಕ್ಕಾರಿನ ದುಗ್ಗಣ್ಣ ಕಾವರು ಇರುವೈಲ್ ಶ್ರೀದುರ್ಗಾ ಪರಮೇಶ್ವರೀ ದೇವರ ದರ್ಶನ ಪಡೆದು ಪೊಸದೈವ ಕೊಡಮಣಿತ್ತಾಯನಿಗೆ ಹರಕೆ ಸಲ್ಲಿಸಲು ಕೆಳಬರ್ಕೆಗೆ ಹೋಗುತ್ತಾರೆ. ಅಲ್ಲಿ ಹರಕೆ ಹಾಕಿ ಗಂಧಪ್ರಸಾದ ಸ್ವೀಕರಿಸಿ ಬಾಯಾರಿಕೆ ನೀಗಿಸಿ ತಮ್ಮ ಊರಿಗೆ ಹೊರಡುತ್ತಾರೆ. ಆಗ ಕೆಳಬರ್ಕೆಯವರು ಅವರಿಗೆ ಒಂದೊಂದು ಎತ್ತು ಮತ್ತು ಕೋಳಿಗಳನ್ನು ಉಡುಗೊರೆಯಾಗಿ ನೀಡುತ್ತಾರೆ. ಉಡುಗೊರೆ




ಎಕ್ಕಾರು ಕೊಡಿಮಣಿತ್ತಾಯ

ಗಳನ್ನು ಹಿಡಿದುಕೊಂಡು ನಡೆದು ಬರುವಾಗ ಇಬ್ಬರಿಗೂ ದಾರಿಮಧ್ಯೆ (ಎಕ್ಕಾರಿನ ಸಮೀಪ) ಬಾಯಾರಿಕೆಯಾಗಿ, ಬಾಯಾರಿಕೆ ನೀಗಿಸಲು ಎತ್ತು ಮತ್ತು ಕೋಳಿಗಳನ್ನು ಸಮೀಪದ ಅಶ್ವತ್ಥ ಮರಕ್ಕೆ ಕಟ್ಟಿಹಾಕಿ ಸಮೀಪ ಕಾಣುತ್ತಿದ್ದ ಮನೆಗೆ ಹೋಗಿ, ಬಾಯಾರಿಕೆ ಆಯಾಸ ಪರಿಹರಿಸಿ ಪ್ರಯಾಣ ಮುಂದುವರಿಸಲು ಅಶ್ವತ್ಥ ಮರದಡಿಗೆ ಬರುವಾಗ ಎತ್ತುಗಳಿಗೆ ಹಾಗೂ ಕೋಳಿಗಳಿಗೆ ಆವೇಶ ಬರುತ್ತಿರುತ್ತದೆ. ಆಶ್ಚರ್ಯವಾದರೂ ಎತ್ತು ಹಾಗೂ ಕೋಳಿಗಳನ್ನು ತಮ್ಮೂರಿಗೆ ಕರೆದುಕೊಂಡು ಹೋಗುತ್ತಾರೆ. ತಾಂಗಡಿ ಬರ್ಕೆಗೆ ಬಂದ ದುಗ್ಗಣ್ಣ ಕಾವರು ಎತ್ತು ಹಾಗೂ ಕೋಳಿಗಳ ಆವೇಶಕ್ಕೆ ಕಾರಣವೇನೆಂದು ಬಲ್ಯಾಯರಲ್ಲಿ ಕೇಳಿದಾಗ ಅವರು ರಾಜನ್ ದೈವಗಳಾದ ಒರಿ ಉಲ್ಲಾಯ ಹಾಗೂ ಧರ್ಮದೈವ ಕೊಡಮಣಿತ್ತಾಯ ನಿಮ್ಮೊಟ್ಟಿಗೆ ಬಂದಿದ್ದಾರೆ ಅವುಗಳನ್ನು ಪ್ರತಿಷ್ಠಾಪಿಸಬೇಕೆಂದು ಹೇಳುತ್ತಾರೆ. ಅವರ ಮಾತಿನಂತೆ ಎಕ್ಕಾರು ಗುಡ್ಡೆಯ ತುದಿಯಲ್ಲಿ ಗುಡಿಕಟ್ಟಿಸಿ ಆರಾಧಿಸುತ್ತಾರೆ. ದೈವಸ್ಥಾನಕ್ಕೆ ಸಂಬಂಧಪಟ್ಟ ಮತ್ತೊಂದು ಕಾರಣಿಕ ಸ್ಥಳವೆಂದರೆ ಅದು ಕಾಯ್ದಂಡ ( ಸವಾರಿಯ ಕಂಡ) ಎರಡು ವರ್ಷಕ್ಕೊಮ್ಮೆ ನಿರಂತರ ಐದು ದಿನಗಳ ಕಾಲ ನೇಮೋತ್ಸವ ನಡೆಯುತ್ತದೆ. ಹಾಗೆಯೆ ನಾಲ್ಕು ಕರೆಗಳಲ್ಲಿ ಪ್ರತ್ಯೇಕವಾಗಿ ತಾಂಗಾಡಿ ಸ್ಥಾನ, ನಡು ನಡ್ಯೋಡಿ ಸ್ಥಾನ, ಕೊಡಿ ಕೊಂಬೋಡಿ ಸ್ಥಾನ, ಬಡಕರೆಯ ಜಾರಾಂದಾಯ ಸ್ಥಾನ. ಊರಿನ ಪ್ರಧಾನ ದೈವಸ್ಥಾನವಾದ ಗುಡ್ಡೆಸಾನದಲ್ಲಿ ಒರಿ ಉಲ್ಲಾಯ, ಕೊಡಮಣಿತ್ತಾಯ, ಕಾಂತೇರಿಧೂಮಾವತಿ ಬಂಟ, ಜಾರಾಂದಾಯ ಬಂಟ, ಸರಳಧೂಮಾವತಿ ಬಂಟ, ಪಿಲಿಚಾಮುಂಡಿ ದೈವಗಳು ನೆಲೆಯಾಗಿವೆ. ಪ್ರತಿವರ್ಷ ಮುಕ್ಕೋಟಿ ದ್ವಾದಶಿಯಂದು ಧ್ವಜರೋಹಣವಾಗಿ ನಿರಂತರ ಐದು ದಿನಗಳ ಕಾಲ ವಾರ್ಷಿಕ ಜಾತ್ರೆ ನಡೆಯುತ್ತದೆ. ಇಲ್ಲಿಯ ವಿಶೇಷವೆಂದರೆ ಉತ್ಸವ ಮೂರ್ತಿಗಳಿಗೆ ಆವೇಶ ಬರುವುದು. ಈ ಸಮಯದಲ್ಲಿ ಇದನ್ನು ನೋಡಲು ಸುತ್ತಮುತ್ತಲಿನ ಗ್ರಾಮಸ್ಥರು ಇಲ್ಲಿ ಸೇರುತ್ತಾರೆ. ದೈವಗಳ ದರುಶನಕ್ಕೆ ಸುಮಾರು ಇನ್ನೂರಕ್ಕೂ ಹೆಚ್ಚು ಮೆಟ್ಟಿಲುಗಳನ್ನು ಹತ್ತಿ ಬೆಟ್ಟದ ತುದಿಗೆ ಹೋಗಬೇಕು. ಇಂತಹ ಕಾರಣಿಕ ಸ್ಥಳಕ್ಕೆ ಒಮ್ಮೆ ಬೇಟಿ ನೀಡಿ ಪುನೀತರಾಗಲು ಮರೆಯದಿರಿ

# ಕಾಮಧೇನು

## ಪ್ರಕೃತಿಯೇ ನಮಗೆ ದಾರಿ ದೀಪ

@ ಕೃಷ್ಣಾಮೃತ

ಪ್ರಕೃತಿಯ ಸವಿಯನ್ನು ಸವಿಯಲು ವಿದೇಶಕ್ಕೆ ಹೋಗುವ ಬದಲು ನಮ್ಮದೇ ನೆಲದಲ್ಲಿ ಇರುವ ಸೊಬಗನ್ನು ನೋಡುವುದು ಬಲು ಮುಖ್ಯ. ದ್ವೀಪಗಳ ಬಗ್ಗೆ ಮಾತಾಡುತ್ತಾ ಹೋದರೆ ನಮ್ಮ ನೆಲದಲ್ಲಿ ಅದೆಷ್ಟು ಸುಂದರವಾದ ದ್ವೀಪಗಳು ನಮ್ಮ ಕಣ್ಮಣ ಸೆಳೆಯುತ್ತಿದೆ. ರಾಸ್ ಅಥವಾ ರೋಸ್ ಐಲ್ಯಾಂಡ್ ಇಂಡಿಯನ್ ಆರ್ಮಿ ಕೈಯಲ್ಲಿದ್ದರೆ, ಪೋರ್ಟಬ್ಲೇರ್‌ನಿಂದ ಒಂದು ಗಂಟೆ ಕಾಲ ಪಯಣಿಸಿದರೆ ಸಿಗುವ ಇನ್ನೊಂದು ಐಲ್ಯಾಂಡ್ ವೈಪರ್ ಐಲ್ಯಾಂಡ್. ಇದು ಗೋಡೆಗಳಿಲ್ಲದ ಬಂದೀಖಾನೆ. ಸೆಲ್ಯುಲರ್ ಜೈಲಿಗಿಂತ ಮೊದಲು ನಮ್ಮ ಸ್ವಾತಂತ್ರ ಯೋಧರನ್ನು ಬಂಧಿಸಿಡಲು ಅದರಲ್ಲೂ ಮುಖ್ಯವಾಗಿ ಮಹಿಳಾ ಕೈದಿಗಳನ್ನು ಬಂಧಿಸಿಡಲು ಉಪಯೋಗಿಸುತ್ತಿದ್ದರು. ಇದಕ್ಕೆ ಮಹಿಳಾ ಜೈಲು ಎಂದೂ ಕರೆಯಲಾಗುತ್ತದೆ. ಇಲ್ಲಿ ಕೈದಿಗಳ ಕೈ ಕಾಲುಗಳಿಗೆ ಕೋಳ ಹಾಕಿ ಬಿಡಲಾಗುತ್ತಿತ್ತು. ಇಲ್ಲಿಂದ ತಪ್ಪಿಸಿಕೊಂಡು ಹೋಗಲು ಯಾರಿಗೂ ಸಾಧ್ಯವಾಗುತ್ತಿರಲಿಲ್ಲ. ಇಲ್ಲಿ ಸ್ವಾತಂತ್ರ



ಹೋರಾಟಗಾರರಿಗೆ ಅದರಲ್ಲೂ ಮಹಿಳಾ ಕೈದಿಗಳಿಗೆ ಚಿತ್ರಹಿಂಸೆ ಕೊಡಲಾಗುತ್ತಿತ್ತು. ಇನ್ನು ಬಂಗಾರದ ಬಣ್ಣದ ಮರಳಿಗೆ ಮತ್ತು ನೀಲಿ ಬಣ್ಣದ ನೀರಿಗೆ ಪ್ರಸಿದ್ದವಾಗಿರುವ ಹ್ಯಾವ್ ಲಾಕ್ ಐಲ್ಯಾಂಡ್‌ಗೆ ಹಡಗಿನಲ್ಲಿ ಪೋರ್ಟ್‌ಬ್ಲೇರ್‌ನಿಂದ ನಾಲ್ಕು ಗಂಟೆಗಳ ಪ್ರಯಾಣ. ಇಲ್ಲಿನ ಬೀಚ್‌ಗಳು ತಿಳಿ ನೀರಿನಿಂದ ಕೂಡಿದೆ. ಇಲ್ಲಿ ಸಮುದ್ರ ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ತನ್ನ ಬಣ್ಣವನ್ನು ಬದಲಿಸುತ್ತದೆ. ಇಲ್ಲಿ ದಟ್ಟ ಹಸುರಿನ ಕಾನನಗಳಿಂದ ಆವರಿಸಲ್ಪಟ್ಟ ರಾಧಾ ನಗರ ಬೀಚ್ ಪ್ರಸಿದ್ಧವಾಗಿದೆ. ಇಲ್ಲಿ ಸ್ಕೂಬಾ ಡೈವಿಂಗ್ ಸುಂದರವಾದ ಅನುಭವ. ಸಮುದ್ರದಿಂದ ಸುಮಾರು 30 ಅಡಿ ಆಳದವರೆಗೂ ಅಲ್ಲಿನ ತರತರಹದ ಮೀನು, ಕಪ್ಪೆಚಿಪ್ಪು ಮತ್ತು ಇತರ ಸಮುದ್ರಜೀವಿಗಳನ್ನು ತೋರಿಸುತ್ತಾರೆ. ಅಲ್ಲಿನ ಬಣ್ಣಬಣ್ಣದ ಮೀನುಗಳು, ಆಕ್ಟೋಪಸ್, ಕಪ್ಪೆಚಿಪ್ಪುಗಳು ಎಲ್ಲಾ ನಮ್ಮ ಮೈನವಿರೇಳಿಸುತ್ತವೆ. ಇಲ್ಲಿ ಡಾಲ್ಫಿನ್ ಬೀಚ್ ಮನಸೆಳೆಯುತ್ತದೆ. ಇನ್ನು ನೀಲ್ ಐಲ್ಯಾಂಡ್ ಅಂಡಮಾನ್‌ನ ಅತಿ ಚಿಕ್ಕದಾದ ಮತ್ತು ಚೊಕ್ಕದಾದ ಐಲ್ಯಾಂಡ್. ಮುಂದೆ ಪೋರ್ಟಬ್ಲೇರ್‌ನಿಂದ 30 ಕಿ.ಮೀ. ದೂರದಲ್ಲಿರುವ ಜಾಲಿ ಬಾಯ್ ಐಲ್ಯಾಂಡ್, ರೆಡ್ ಸ್ಕಿನ್ ಐಲ್ಯಾಂಡ್ ಕೂಡ ನೀರಿನ ಆಳದಲ್ಲಿರುವ ಹವಳ ಮತ್ತು ತಿಳಿನೀರಿನ ಬೀಚ್‌ಗಳಿಗೆ ಪ್ರಸಿದ್ಧವಾಗಿದೆ. ಇದನ್ನು ನೋ ಮ್ಯಾನ್ ಐಲ್ಯಾಂಡ್ ಎಂದೂ ಕೂಡ ಕರೆಯುತ್ತಾರೆ. ಹಾಗಾಗಿ ಇಲ್ಲಿ ಏನು ಸಿಗುವುದಿಲ್ಲ. ದಕ್ಷಿಣ ಮತ್ತು ಮಧ್ಯ ಅಂಡಮಾನ್ ನಡುವೆ ಪೋರ್ಟ್‌ಬ್ಲೇರ್‌ನಿಂದ 100ಕಿ.ಮೀ. ದೂರದಲ್ಲಿ ಇರುವ ಬಾರಾತಾಂಗ್ ಐಲ್ಯಾಂಡ್ ಸುಣ್ಣಕಲ್ಲುಗಳ ಗುಹೆ ಮತ್ತು ಮಣ್ಣಿನ ಜ್ವಾಲಾಮುಖಿಗಳಿಗೆ ಪ್ರಸಿದ್ಧವಾಗಿದೆ. ಜರಾವಾ ಬುಡಕಟ್ಟು ಜನಾಂಗದವರು ವಾಸಿಸುವ ಕಾಡಿನ ಮೂಲಕ ಪ್ರಯಾಣಿಸ ಬೇಕಾಗುವ ಜರಾವಾ ಸರಹದ್ದಿನಲ್ಲಿ ಛಾಯಾಗ್ರಹಣ ನಿಷಿದ್ಧ. ಪೋರ್ಟಬ್ಲೇರ್‌ನಿಂದ ಸುಮಾರು 8 ಕಿ.ಮೀ. ದೂರದಲ್ಲಿರುವ ಕೋವ್‌ಬೀಚ್ ನಗರಕ್ಕೆ ಅತೀ ಹತ್ತಿರವಿರುವ ಬೀಚ್. ಇದು ಈಜಲು, ಬಿಸಿಲು ಸ್ನಾನ ಮತ್ತು ಜಲಕ್ರೀಡೆಗಳಿಗೆ ಹೇಳಿ ಮಾಡಿಸಿದಂತಹ ಜಾಗ. ಪೋಟ್‌ಬ್ಲೇರ್‌ನಿಂದ ಸುಮಾರು 25 ಕಿ.ಮೀ. ದೂರದಲ್ಲಿ ಚಿಡಿಯಾ ಟಾಪು ಎನ್ನುವ ಪಕ್ಷಿಗಳ ದ್ವೀಪವಿದೆ. ಇಲ್ಲಿ ವಿವಿಧ 46ಕ್ಕಿಂತಲೂ ಹೆಚ್ಚಿನ ಜಾತಿಯ ಪಕ್ಷಿಗಳು ಕಾಣಸಿಗುತ್ತದೆ. ಬಣ್ಣ ಬಣ್ಣದ ಚಿಟ್ಟೆಗಳು ಕೂಡ ಕಣ್ಣಿಗೆ ಮುದ ನೀಡುತ್ತದೆ. ಪೋರ್ಟ್‌ಬ್ಲೇರ್ ಭಾರತೀಯ ಸಂಪ್ರದಾಯದಿಂದ ಕೂಡಿದ ಚಿಕ್ಕ ನಗರವಾಗಿದೆ. ಇಲ್ಲಿ ಕಿಂಗ್ ಎಳನೀರು ತುಂಬಾ ಪ್ರಸಿದ್ಧವಾಗಿದೆ. ಇಲ್ಲಿನ ಊಟದಲ್ಲಿ ಮೀನು ಮತ್ತಿತರ ಸಮುದ್ರಾಹಾರಗಳು ಪ್ರಮುಖವಾಗಿದೆ. ಅಕ್ಟೋಬರ್‌ನಿಂದ ಮೇ ತಿಂಗಳವರೆಗಿನ ಸಮಯದಲ್ಲಿ ಇಲ್ಲಿಗೆ ಬೇಟಿ ನೀಡುವುದು ಸೂಕ್ತವಾಗಿರುತ್ತದೆ. ಪೂರ್ಣ ಅಂಡಮಾನ್ ಸುತ್ತಬೇಕಾದರೆ 9ರಿಂದ 10 ದಿನಗಳು ಬೇಕಾಗುತ್ತದೆ. ಐಲ್ಯಾಂಡ್‌ಗಳನ್ನು ನೋಡುವುದು ಕಣ್ಣಿ ಹಬ್ಬವಾದರೆ ಅದರ ಜೊತೆಯಲ್ಲಿ ಮಹಾತ್ಮ ಗಾಂಧಿ ಮೆರೀನ್ ನ್ಯಾಷನಲ್ ಪಾರ್ಕ್, ಸೆಲ್ಯುಲರ್ ಜೈಲು, ಮತ್ಸ್ಯಾಗಾರ, ಸ ಮುದ್ರಿಕಾ ನೌಕಾಮ್ಯೂಸಿಯಂ, ಆಂತ್ರೊಪಾಲಜಿ ಮ್ಯೂಸಿಯಂ, ಖಾದಿ ಗ್ರಾಮೋದ್ಯೋಗ ಭವನ. ಅಬರ್ದಾನ್ ಬಜಾರ್ ಕೂಡ ಇದೆ.

# ಕಲ್ಪವೃಕ್ಷ

@ಪ್ರೀತಂ ರೈ ಇ

## ಫ್ಲೈಟ್ ಲೆಫ್ಟಿನೆಂಟ್ ಗುರ್ದೇವ್ ಸಿಂಗ್ ರೈ

1971 ರ ಸಮಯದಲ್ಲಿ, Flt ಲೆಫ್ಟಿನೆಂಟ್ ಗುರುದೇವ್ ಸಿಂಗ್ ರೈ ಅವರು "ಫ್ಲೇಮಿಂಗ್ ಆರೋಸ್" ಎಂದು ಕರೆಯಲ್ಪಡುವ 27 Sqn ನೊಂದಿಗೆ ಸೇವೆ ಸಲ್ಲಿಸುತ್ತಿದ್ದರು. 1971 ರಲ್ಲಿ, ಹಲ್ವಾರದಿಂದ ಕಾರ್ಯನಿರ್ವಹಿಸುವ 27 ಸ್ಕ್ವಾಡ್ರನ್ ತನ್ನ ಪಾತ್ರವನ್ನು ಆಳವಾದ ನುಗ್ಗುವ ಯೋಜನೆಗೆ ಬದಲಾಯಿಸಿ, ಹಲ್ವಾರದಿಂದ ಪಠಾಣ್‌ಕೋಟ್‌ಗೆ ಸ್ಥಳಾಂತರಿಸಲಾಯಿತು. ಡಿಸೆಂಬರ್ 3, 1971 ರಂದು ಪಾಕಿಸ್ತಾನದೊಂದಿಗೆ ಯುದ್ಧ ಪ್ರಾರಂಭವಾದಾಗ, ಈಟಣ ಲೆಫ್ಟಿನೆಂಟ್ ಜಿಎಸ್ ರೈ ಅವರು ಪಾಕಿಸ್ತಾನದ ಒಳಗಿನ ಸಕೇಸರ್ ಸಿಗ್ನಲ್ಸ್ ಯುನಿಟ್ ಸಂಕೀರ್ಣದಲ್ಲಿ ಸ್ಟ್ರೈಕ್ ಕಾರ್ಯಾಚರಣೆಯನ್ನು ಕೈಗೊಳ್ಳಲು ಮುಂದುವರಿದರು. ಅವರ ಮೊದಲ ವೈಮಾನಿಕ ದಾಳಿಯು ಅತ್ಯಂತ ಯಶಸ್ವಿಯಾಗಿ, ಶತ್ರು ಸ್ಥಾಪನೆಗಳನ್ನು ಸ್ಫೋಟಿಸಿದ ನಂತರ ಅವರು ಸುರಕ್ಷಿತವಾಗಿ ಮರಳಿದರು. ಶತ್ರುಗಳು ತಮ್ಮ ವಾಯು ಪ್ರದೇಶವನ್ನು ರಕ್ಷಣಾ ಸ್ವತ್ತುಗಳಿಂದ ಹೆಚ್ಚು ರಕ್ಷಿಸಲಾಗಿದ್ದರೂ, ಜಿಎಸ್ ರೈ ಸ್ಕ್ರಾಚ್ ಇಲ್ಲದೆ ಬೇಸ್‌ಗೆ ಮರಳಿದರು. 5ನೇ ಡಿಸೆಂಬರ್ 1971 ರಂದು, Flt ಲೆಫ್ಟಿನೆಂಟ್ ಜಿಎಸ್ ರೈ ಅವರನ್ನು ಅದೇ ಗುರಿಯ ಸ್ಟ್ರೈಕ್ ಮಿಷನ್‌ನ ನಾಯಕ ಎಂದು ಘೋಷಿಸಲಾಯಿತು. ಪ್ರಬಲ ಶತ್ರುಗಳ ವಿರೋಧದ




ನಡುವೆಯೂ ಅವರು ಎದೆಗುಂದದ ಧೈರ್ಯ ಮತ್ತು ದೃಢತೆಯನ್ನು ಪ್ರದರ್ಶಿಸಿದರು ಮತ್ತು ಶತ್ರು ರಾಡಾರ್ ಘಟಕವನ್ನು ಸಂಪೂರ್ಣವಾಗಿ ಗಾಳಿಯಿಂದ ದೂರವಿಡುವ ಮಟ್ಟಿಗೆ ಹಾನಿ ಮಾಡುವಲ್ಲಿ ಯಶಸ್ವಿಯಾದರು. ಆದರೆ ದುರದೃಷ್ಟವಶಾತ್, ನಂತರ ಅವರನ್ನು ಸಂಪರ್ಕಿಸಲು ಸಾಧ್ಯವಾಗಲಿಲ್ಲ. ಈಟಣ ಲೆಫ್ಟಿನೆಂಟ್ ಜಿಎಸ್ ರೈ ಅಥವಾ ಅವರ ವಿಮಾನವು ಇಂದಿಗೂ ಪತ್ತೆಯಾಗಿಲ್ಲ ಮತ್ತು ಅವರು ಆಕ್ಷನ್‌ನಲ್ಲಿ ಕೊಲ್ಲಲ್ಪಟ್ಟಿದ್ದಾರೆಯೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಪ್ರಸ್ತುತ, ಅವರ ಹೆಸರು '54 ಸಿಬ್ಬಂದಿ ಕಾಣೆಯಾಗಿದ್ದಾರೆ' ಎಂಬ ಅಧಿಕೃತ ಪಟ್ಟಿಯಲ್ಲಿದೆ. Flt ಲೆಫ್ಟಿನೆಂಟ್ ಗುರುದೇವ್ ಸಿಂಗ್ ರೈ ಅವರಿಗೆ ಅವರ ಅತ್ಯುತ್ತಮ ಶೌರ್ಯ, ಕರ್ತವ್ಯ ನಿಷ್ಠೆ ಮತ್ತು ಅತ್ಯುನ್ನತ ತ್ಯಾಗಕ್ಕಾಗಿ 26 ಜನವರಿ 1972 ರಂದು "ವೀರ ಚಕ್ರ" ಎಂಬ ಶೌರ್ಯ ಪ್ರಶಸ್ತಿಯನ್ನು ನೀಡಲಾಯಿತು, ಫ್ಲೈಟ್ ಲೆಫ್ಟಿನೆಂಟ್ ಗುರುದೇವ್ ಸಿಂಗ್ ರೈ ಅವರು 11 ಫೆಬ್ರವರಿ 1945 ರಂದು ಪಂಜಾಬ್‌ನ ಲುಧಿಯಾನ ಜಿಲ್ಲೆಯ ಚಕ್ ಸರ್ವನ್ ನಾಥ್ ಗ್ರಾಮದಲ್ಲಿ ಜನಿಸಿದರು. ಅವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಹರ್ಮನ್ ಹಳ್ಳಿಯಲ್ಲಿ ಮಾಡಿದರು ಮತ್ತು ಕಟಾನಾ ಕಲ್ಯಾಣ್‌ನಲ್ಲಿರುವ ಹೈಸ್ಕೂಲ್‌ನಲ್ಲಿ ಹೆಚ್ಚಿನ ಅಧ್ಯಯನ ಮಾಡಿದರು ಮತ್ತು ನಂತರ ಆರ್ಯ ಕಾಲೇಜು ಲುಧಿಯಾನಕ್ಕೆ ಹೋದರು. ಅವರು 19 ನೇ ವಯಸ್ಸಿನಲ್ಲಿ 25 ಡಿಸೆಂಬರ್ 1964 ರಂದು ಭಾರತೀಯ ವಾಯುಪಡೆಗೆ ನಿಯೋಜಿಸಲ್ಪಟ್ಟಿದ್ದರು. ಇಂತಹ ವೀರನಿಗೆ ಕರಾವಳಿ ತರಂಗಿಣಿ ನಮಿಸುತ್ತಿದೆ.

# ಪಾರಿಜಾತ

ಕರಾವಳಿ ತರಂಗಿಣಿ

ಕೌಟುಂಬಿಕ ವ್ಯವಸ್ಥೆ ಸಂಪೂರ್ಣವಾಗಿ ಹೆಣ್ಣಿನ ಕೈನಲ್ಲಿದೆ. ಅವಳಿಲ್ಲವಾದರೆ ಯಾವ ಕಾರ್ಯವು ನಡೆಯುವುದಿಲ್ಲ. ಸಂಸಾರದಲ್ಲಿ ಆಕೆಯ ಪಾತ್ರ ಬಹಳ ಮುಖ್ಯವಾಗಿದೆ. ಕುಟುಂಬದಲ್ಲಿ ಮಕ್ಕಳಿಗೆ 'ಸಂಸ್ಕೃತಿ', ಸತ್ಸಂಪ್ರದಾಯಗಳನ್ನು ಕಲಿಸಿಕೊಡುವುದು ಮುಖ್ಯವಾಗಿ ತಾಯಿಯ ಜವಾಬ್ದಾರಿಯಾಗಿದೆ. ಹೆಣ್ಣು ಸಂಸಾರದ ಕಣ್ಣು ಎಂದು ಹೇಳುತ್ತಿರುವ ಈ ಜಗತ್ತಿನಲ್ಲಿ ಹೆಣ್ಣನ್ನು ಅಬಲೆಯಾಗಿ ನೋಡುವುದನ್ನು ನಿಲ್ಲಿಸುವುದಿಲ್ಲ. ಸಮಾಜದಲ್ಲಿ ತಲತಲಾಂತರದಿಂದ ರೂಡಿಯಲ್ಲಿರುವ ಮೂಡನಂಬಿಕೆಗಳಲ್ಲಿ ಹೆಚ್ಚಿನವು ಒಳಗೊಳ್ಳುವುದು ಮಹಿಳೆಯನ್ನು. ಶತಶತಮಾನಗಳ ನಡೆಯಲ್ಲಿ ಸ್ತ್ರೀಯರನ್ನು, ಮಕ್ಕಳು ಹೇರುವ ಯಂತ್ರಗಳಾಗಿಯೇ ನಡೆಸಿಕೊಂಡು ಬಂದಿದ್ದಾರೆ. ಹೆಣ್ಣು ಕೇವಲ ಪುರುಷನ ಭೋಗದ ವಸ್ತು ಎಂದು ಪರಿಗಣಿಸಿದ್ದರಿಂದ ಯಾವುದೇ ವಿಷಯಕ್ಕೂ ಅವಳ ಅಭಿಪ್ರಾಯ ಕೇಳುವ ಅವರ ಬಗೆಗೆ ಕಾಳಜಿ ವಹಿಸುವ ಪ್ರಮೇಯವೇ ಇರಲಿಲ್ಲ. ಇಂದು ಆಧುನಿಕವಾಗಿ ಜಗತ್ತು ಮುನ್ನಡೆಯುತ್ತಿದ್ದರೂ, ಎಲ್ಲಾ ರಂಗದಲ್ಲೂ ಮಹಿಳೆಯರು ತಮ್ಮ ಛಾಪು ಮೂಡಿಸಿದ್ದರೂ ಅವರ ಮೇಲೆ ದೌರ್ಜನ್ಯ, ಶೋಷಣೆ ನಡೆಯುತ್ತಲೇ ಇದೆ. ವೇದಕಾಲದಲ್ಲಿ ಸ್ತ್ರೀಯರಿಗೆ ಧಾರ್ಮಿಕ ಸ್ವಾತಂತ್ರ್ಯವಿತ್ತು. ಸ್ತ್ರೀಯರು ಬ್ರಹ್ಮವಾದಿನಿಯರಾಗಿ ಬ್ರಹ್ಮ ಸಭೆಗಳಲ್ಲಿ ಪುರುಷರ ಸಮಾನವಾಗಿ ವಾದ ಮಾಡಬಲ್ಲವರಾಗಿದ್ದರು ಎಂದು ಹೇಳಿ ಅಪಾಲಾ, ಲೋಪಾಮುದ್ರೆ, ಮೈತ್ರೇಯಿ, ಗಾರ್ಗಿ, ಉಭಯಭಾರತಿ ಇತ್ಯಾದಿ ಬೆರಳಣಿಕೆ ಸ್ತ್ರೀಯರನ್ನು ಉದಾಹರಣೆಯಾಗಿ ನೀಡುತ್ತಾರೆ. ಆದರೆ ಸಾಮಾನ್ಯ ಮಹಿಳೆಯರಿಗೆ ಇಂತಹ ಅಧಿಕಾರ ಇರಲಿಲ್ಲ. ಹೆಣ್ಣನ್ನು ಅಡುಗೆ ಮನೆಗೆ ಕಟ್ಟಿ ಹಾಕಿದ್ದ ಆ ದಿನಗಳಲ್ಲೂ ಕೆಲವು ಮಹಿಳೆಯರು ಅಸಾಮಾನ್ಯವಾದುದನ್ನು ಸಾಧಿಸಿ ಗಂಡಿಗಿಂತ ತಾನು ಯಾವುದರಲ್ಲೂ ಕಡಿಮೆ ಇಲ್ಲ ಎನ್ನುವುದನ್ನು ಸಾಧಿಸಿ ತೋರಿಸಿ, ಅದೆಷ್ಟೋ ಹೆಣ್ಣು ಮಕ್ಕಳಿಗೆ ಮಾದರಿಯಾಗಿದ್ದಾರೆ. ಅಂತಹ ಹೆಣ್ಣು ಮಕ್ಕಳಲ್ಲಿ "ಕರಾವಳಿ ತರಂಗಿಣಿ"ಯ



ಇಂದಿನ ಅತಿಥಿ ಕರ್ನಾಟಕದ ಪ್ರಥಮ ರಾಜ್ಯಪಾಲೆ "ವಿ.ಎಸ್.ರಮಾದೇವಿ". ರಮಾದೇವಿಯವರು ಆಂಧ್ರ ಪ್ರದೇಶದ 'ವಿ.ವಿ.ಸುಬ್ಬಯ್ಯ' ಮತ್ತು 'ವಿ. ವೆಂಕಟರತ್ನಮ್ಮ' ದಂಪತಿಗಳ ಮಗಳಾಗಿ 1934 ರ ಜನವರಿ 15 ರಂದು ಜನಿಸಿದರು. ಎಮ್.ಎ, ಎಲ್.ಎಲ್.ಬಿಪದವಿಗಳಿಸಿದ ನಂತರ ಆಂಧ್ರ ಪ್ರದೇಶದ ಹೈಕೋರ್ಟ್‌ನಲ್ಲಿ ವಕೀಲ ವೃತ್ತಿಯನ್ನು ಆರಂಭಿಸಿದರು. ಆಮೇಲೆ ಹಂತ ಹಂತ ಮೇಲೇರಿ ಭಾರತೀಯ ಕಾನೂನು ಸೇವಾ ಪ್ರಾಧಿಕಾರದ ಸದಸ್ಯೆ, ಶಾಸಕಾಂಗ ಇಲಾಖೆಯ ವಿಶೇಷ ಕಾರ್ಯದರ್ಶಿ, ಕೇಂದ್ರ ಕಾನೂನು ಆಯೋಗದ ಸದಸ್ಯ ಕಾರ್ಯದರ್ಶಿ, ಮಹಿಳಾ ಆಯೋಗದ ಸಲಹೆಗಾರ ಹುದ್ದೆ, ಮೊದಲಾದ ಕೇಂದ್ರ ಸರಕಾರದ 'ಎ' ದರ್ಜೆ ಹುದ್ದೆಗಳಲ್ಲಿ ದೀರ್ಘಕಾಲ ಸೇವೆ ಸಲ್ಲಿಸಿದ್ದಾರೆ. ರಾಜ್ಯಸಭೆಯ ಸೆಕ್ರೆಟರಿ ಜನರಲ್ ಆಗಿ ಸೇವೆ ಸಲ್ಲಿಸಿದ ಇವರು 1990ರ ನವೆಂಬರ್ 26 ರಿಂದ ಡಿಸೆಂಬರ್ 11ರವರೆಗೆ ಕೇಂದ್ರ ಸರಕಾರದ ಚುನಾವಣಾ ಆಯುಕ್ತರಾಗಿದ್ದರು. ಇವರು ರಾಜಭವನದಲ್ಲಿ ವಾಸ್ತವ್ಯದಲ್ಲಿದ್ದಾಗ, ರಾಜಭವನಕ್ಕೆ ಶ್ರೀ ಸಾಮಾನ್ಯನಿಗೆ ಮುಕ್ತ ಪ್ರವೇಶ ಕಲ್ಪಿಸಿ, ಅವರ ಅಹವಾಲುಗಳನ್ನು ಆಲಿಸಿ ಅವುಗಳಿಗೆ ಸ್ಪಂದಿಸುತ್ತಿದ್ದರು. 'ಕನ್ನಡದಲ್ಲೇ ಪ್ರತಿಜ್ಞಾವಿಧಿ' ಸ್ವೀಕರಿಸಿ, ಕನ್ನಡ ದಲ್ಲೇ ವ್ಯವಹರಿಸುತ್ತಿದ್ದರು. ನಾಡಿನುದ್ದಕ್ಕೂ ಸಂಚರಿಸಿ ಸಣ್ಣ-ಪುಟ್ಟ ಕಾರ್ಯಕ್ರಮಗಳಲ್ಲೂಅತಿಥಿಯಾಗಿ ಭಾಗಿಯಾಗಿ, ಕನ್ನಡದಲ್ಲೇ ಭಾಷಣ ಮಾಡಿ, ಜನರ ಆದರಕ್ಕೆ ಪಾತ್ರರಾಗಿದ್ದರು. ಕರ್ನಾಟಕದ ರಾಜ್ಯಪಾಲೆಯಾದ ಸಮಯದಲ್ಲೇ ಅವರ ಪತಿ 'ರಾಮಾವತಾರ್,' ನಿಧನರಾದರು. ಸಾರ್ವಜನಿಕ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿಗಳನ್ನು ಗಣರಾಜ್ಯದ ಸಂದರ್ಭದಲ್ಲಿ ಗೌರವಿಸುವ ಪರಿಪಾಠವನ್ನು ಹುಟ್ಟುಹಾಕಿದ ಶ್ರೇಯಸ್ಸು ರಮಾದೇವಿಯವರಿಗೆ ಸಲ್ಲಬೇಕು. ಮೂಲತಃ ಆಂಧ್ರಪ್ರದೇಶದವರಾದ 'ರಮಾದೇವಿಯವರು', ದೀರ್ಘಕಾಲದ ಅನಾರೋಗ್ಯದಿಂದ ಬಳಲುತ್ತಿದ್ದು, 79ನೇ ವಯಸ್ಸಿನಲ್ಲಿ ಬೆಂಗಳೂರಿನ ಎಚ್.ಎಸ್.ಆರ್.ಲೇ ಔಟ್‌ನಲ್ಲಿರುವ ಮನೆಯಲ್ಲಿ ಕೊನೆಯುಸಿರೆಳೆದರು. ಕರಾವಳಿ ತರಂಗಿಣಿ ಇಂತಹ ದೀಮಂತೆಗೆ ನಮಿಸುತ್ತಿದೆ.

# ಇಚ್ಛಾಶಕ್ತಿ ಇದ್ದರೆ ಸಾಧನೆ ಸಾಧ್ಯ- ಡಾ.ಯು.ಕೆ.ಮೋನು

ಒಂದನೇ ಪುಟದಿಂದ......

ಛಲ ಬಾಲ್ಯದಲ್ಲಿಯೇಇತ್ತು. ಆದರೆ ಶಿಕ್ಷಣ 3ನೇ ತರಗತಿಗೆ ಸೀಮಿತವಾಯಿತು. ತಂದೆ ಬ್ರಿಟಿಷ್ ಸರ್ಕಾರದಲ್ಲಿ ನೌಕರನಾಗಿದ್ದರು. ಅನಿವಾರ್ಯ ಸ್ಥಿತಿಯಿಂದ ಬಡತನ ಅನುಭವಿಸಿದ್ದೆವು. ಬಾಲ್ಯದಲ್ಲಿ ಅಡಕೆ ಹೆಕ್ಕುವ ಕೆಲಸ, ಮೂಟೆ ಹೊರುವ ಕೆಲಸ ಸೇರಿದಂತೆ ಹಲವು ರೀತಿಯ ಕೂಲಿ ಕೆಲಸ ಮಾಡಿದ್ದೆ. ಇದ್ದಿಲು ಮಾಡುವ ಕೆಲಸ ಕೂಡ ಮಾಡಿದ್ದೆ, ಹದಿ ಹರೆಯದಲ್ಲೇ ವ್ಯವಹಾರ ಕ್ಷೇತ್ರಕ್ಕೆ ಇಳಿದೆ. ಟಿಂಬರ್ ವ್ಯಾಪಾರದಲ್ಲಿ ಯಶಸ್ಸುಕಂಡೆ. ಕೆಲವೇ ವರ್ಷದಲ್ಲಿ ರಾಜ್ಯದಲ್ಲೇ ಮುಂಚೂಣಿಯ ಟಿಂಬರ್ ವ್ಯಾಪಾರಿಯಾಗಿ ಗುರುತಿಸಿಕೊಂಡೆ ಎಂದು ಅವರು ಸಾಗಿ ಬಂದ ಹಾದಿಯನ್ನು ಸ್ಮರಿಸಿಕೊಂಡರು. ಈ ನೆಲದ ಕಾನೂನು ಗೌರವಿಸಿ ಪ್ರಾಮಾಣಿಕವಾಗಿ ವ್ಯವಹಾರ ನಡೆಸುತ್ತಾ ಬಂದೆ. ಮಲೇಶ್ಯಾ, ಸಿಂಗಾಪುರ ಸಹಿತ ವಿದೇಶಗಳಲ್ಲಿಯೂ ವ್ಯವಹಾರ ಸಂಸ್ಥೆ ಆರಂಭಿಸಿದೆ. ಮೂರನೇ ಕ್ಲಾಸ್ ಕಲಿತರೂ ಇಂಗ್ಲಿಷ್, ಹಿಂದಿ, ಗುಜರಾತಿ, ತಮಿಳು ಸೇರಿದಂತೆ ಹತ್ತಾರು ಭಾಷೆಗಳನ್ನು ಕಲಿತೆ. ಹತ್ತಾರು ದೇಶ ಸುತ್ತಿದ್ದೇನೆ. ನನ್ನ ಮಕ್ಕಳು ಶಿಕ್ಷಣ ಪಡೆಯುವ ಸಂದರ್ಭ ಉತ್ತಮ ಶಿಕ್ಷಣ ಸಿಗಲು ಇರುವ ಹಲವು ತೊಡಕುಗಳನ್ನು ಸ್ವತಃ ಅನುಭವಿಸಿದೆ. ಇದೇ ನೋವು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಕಾರಣವಾಯಿತು. ಹುಟ್ಟೂರಿನಲ್ಲಿಯೇ ಹಂತಹಂತವಾಗಿ ಶಿಕ್ಷಣ ಸಂಸ್ಥೆಗಳನ್ನು ತೆರೆದೆ. ಮೆಡಿಕಲ್ ಕಾಲೇಜು ಸ್ಥಾಪಿಸುವ ಬಹುಕಾಲದ ಕನಸು ಕೂಡಾ ನನಸಾಯಿತು ಮುಂದೆ ಇಂಜಿನಿಯರಿಂಗ್ ಹಾಗೂ ಡೆಂಟಲ್ ಕಾಲೇಜು ಸ್ಥಾಪಿಸುವ ಯೋಜನೆ ಇದೆ ಎಂದು ಯು.ಕೆ.ಮೋನು ತಿಳಿಸಿದರು.

# ಎಂ.ಎನ್.ಆರ್ ಯಾರಿಗೂ ಅರ್ಥ ಆಗಿಲ್ಲ – ಕೋಟ ಶ್ರೀನಿವಾಸ ಪೂಜಾರಿ

ಒಂದನೇ ಪುಟದಿಂದ......

ಅವರು ದಕ್ಷಿಣಕನ್ನಡ ಜಿಲ್ಲಾ ಕೇಂದ್ರ ಸರಕಾರಿ ಬ್ಯಾಂಕ್‌ನ ಸಭಾಂಗಣದಲ್ಲಿ ನಡೆದ ಡಾ.ಎಂ ಎನ್. ರಾಜೇಂದ್ರಕುಮಾರ್‌ರವರ 76ನೇ ಹುಟ್ಟುಹಬ್ಬ ಅಭಿನಂದನಾ ಸಮಾರಂಭ ಹಾಗೂ ಸವಲತ್ತು ವಿತರಣೆ ಕಾರ್ಯಕ್ರಮದಲ್ಲಿ ಭಾಷಣ ಮಾಡುತ್ತಾ, ಸಹಕಾರಿ ಕ್ಷೇತ್ರದಲ್ಲಿ ಕಾರ್ನಾಡು ಸದಾಶಿವರಾಯರು ಬಹುದೊಡ್ಡ ಹೆಸರು. ಇತಿಹಾಸದ ಪುಟವನ್ನು ನೋಡಿದರೆ ಕಾರ್ನಾಡು ಸದಾಶಿವರಾಯರು ಅಗರ್ಭ ಶ್ರೀಮಂತರು. ಸ್ವಾತಂತ್ರ್ಯ ಹೋರಾಟದ ಹುಚ್ಚನ್ನು ಹಿಡಿಸಿಕೊಂಡ ಕಾರ್ನಾಡರು ತನ್ನ ಎಲ್ಲಾ ಆಸ್ತಿಯನ್ನು ಕಳೆದುಕೊಳ್ಳುತ್ತಾರೆ. ಅಂತಹ ಕಾರ್ನಾಡು ಸದಾಶಿವರಾಯರು ಕಟ್ಟಿದ ಸಹಕಾರಿ ಕ್ಷೇತ್ರದಲ್ಲಿ ಕರ್ನಾಟಕದಲ್ಲಿ ಉತ್ತುಂಗದಲ್ಲಿ ಇರುವ ಹೆಸರು ಎಂ.ಎನ್.ರಾಜೇಂದ್ರಕುಮಾರ್. ದಕ್ಷಿಣಕನ್ನಡದಲ್ಲಿ ಸಹಕಾರಿ ಕ್ಷೇತ್ರವನ್ನು ಕಟ್ಟಿದವರು ಮೊಳವಳ್ಳಿ ಶಿವರಾಯರು. ಶಿವರಾಯರಿಗೆ ಸರಿಗಟ್ಟುವ ಮತ್ತೊಬ್ಬ ಸಹಕಾರಿ ದುರೀಣ ಎಂದರೆ ರಾಜೇಂದ್ರಕುಮಾರ್ ಎಂದರು. 60 ಕೋಟಿ ಠೇವಣಿ ಇದ್ದ ಬ್ಯಂಕ್ ಇಂದು 8000 ಕೋಟಿ ಠೇವಣಿಗೆ ಏರಿದೆ ಎಂದರೆ ಅದು ಸುಲಭದ ಮಾತಲ್ಲ 15000 ಕೋಟಿ ರೂಪಾಯಿ ವಾರ್ಷಿಕ ವ್ಯವಹಾರ ಮಾಡ್ತೀರಾ ಅಂದ್ರೆ ನಿರೀಕ್ಷೆ ಮಾಡಕ್ಕೂ ಸಾಧ್ಯ ಇಲ್ಲ ಎಂದರು. ಅಭಿನಂದನೆ ಸ್ವೀಕರಿಸಿದ ಮಾತನಾಡಿದ ಡಾ.ಎಂ ಎನ್.ರಾಜೇಂದ್ರ ಕುಮಾರ್, ಮೈಕ್ರೋ ಫೈನಾನ್ಸ್ ನಿಂದ ತೊಂದರೆ ಆಗುತ್ತಿದೆ ಎಂಬ ವಿಚಾರ ಎಲ್ಲಾ ಕಡೆ ಚರ್ಚೆ ಆಗುತ್ತಿದೆ. ಆದರೆ ಮೈಕ್ರೋ ಫೈನಾನ್ಸ್ ನ ಮೂಲ ಆಶಯ ತಳಿದುಕೊಂಡರೆ ಯಾರಿಗು ತೊಂದರೆ ಆಗಲು ಸಾಧ್ಯವಿಲ್ಲ. 10ಜನರ ಗುಂಪು ಮಾಡಿಕೊಂಡು ಭದ್ರತೆಯೊಂದಿಗೆ ಸಾಲ ಕೊಡುವುದು ಮೈಕ್ರೋ ಫೈನಾನ್ಸ್‌ನ ಕ್ರಮವಾಗಿದೆ. ಚೆನ್ನೈ ತೆಲಂಗಾಣದಿಂದ ಬಂದು ಒಬ್ಬೊಬ್ಬರಿಗೆ ಮೈಕ್ರೋ ಫೈನಾನ್ಸ್ ಹೆಸರಿನಲ್ಲಿ ಸಾಲ ಕೊಡುವವರ ಬಗ್ಗೆ ಸರಕಾರಕಣ್ಣು ಬಿಟ್ಟು ನೋಡಬೇಕುಎಂದರು.

# ಕೈದಿಗಳಿಗೆ ಚಾಪುಡಿ ನೀಡುವಯೋಗ್ಯತೆ ಸರಕಾರಕ್ಕಿಲ್ಲವೇ- ನಂದನ್ ಮಲ್ಯ

ಒಂದನೇ ಪುಟದಿಂದ......

ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು. ನಗರದ ಜೈಲ್‌ನೊಳಗೆ ರಸ್ತೆಯಿಂದ ಪೊಟ್ಟಣ ಎಸೆದ ಪ್ರಕರಣಕ್ಕೆ ಸಂಬಂದಿಸಿ ಸಮಗ್ರ ತನಿಖೆಗೆ ಜಿಲ್ಲಾ ಉಸ್ತುವಾರಿ ಸಚಿವರು ಆದೇಶಿಸಬೇಕು. ಪೊಟ್ಟಣ ಎಸೆದವರು ಯಾರು, ಅದರಲ್ಲಿ ಏನಿತ್ತು, ಯಾರು ಈ ಪ್ರಕರಣವನ್ನು ಕೋ ಆರ್ಡಿನೇಶನ್ ಮಾಡಿದ್ದಾರೆ ಎಂಬುದನ್ನು ಪತ್ತೆಹಚ್ಚಬೇಕು ಎಂದು ಬಿಜೆಪಿ ದಕ್ಷಿಣಕನ್ನಡ ಜಿಲ್ಲಾ ಯುವಮೋರ್ಚಾ ಒತ್ತಾಯಿಸಿದೆ. ದಕ್ಷಿಣಕನ್ನಡಜಿಲ್ಲೆ ಶಿಕ್ಷಣ, ಆರೋಗ್ಯಕ್ಕೆ ಹೆಸರಾಗಿದೆ. ಆದರೆ, ಜಿಲ್ಲೆಯಲ್ಲಿ ಈಗ ಸುಲಭವಾಗಿ ವಿದ್ಯಾರ್ಥಿಗಳ ಕೈಗೆ ಡ್ರಗ್ಸ್ ಸಿಗುತ್ತಿದೆ. ಡ್ರಗ್ಸ್ ಪೂರೈಕೆ ಹಾಗೂ ಅಮಲು ಪದಾರ್ಥ ಸೇವನೆಯಿಂದ ನಡೆಯುವ ಅಪರಾಧ ಕೃತ್ಯಗಳ ತಡೆಗೆ ಪೊಲೀಸ್ ಇಲಾಖೆ ವಿಫಲವಾಗಿದೆ. ದುಷ್ಟಗಳನ್ನು ನಿಲ್ಲಿಸಲು ಸರಕಾರಕ್ಕೂ ಆಸಕ್ತಿ ಇಲ್ಲ. ದಕ್ಷಿಣ ಕನ್ನಡ ಡ್ರಗ್ಸ್ ಮುಕ್ತ ಜಿಲ್ಲೆಯಾಗಲು ಸರಕಾರ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಪೊಲೀಸ್ ಇಲಾಖೆಗೆ ಮುಕ್ತವಾಗಿ ಕೆಲಸ ಮಾಡಲು ರಾಜ್ಯಕಾಂಗ್ರೆಸ್ ಸರಕಾರ ಸ್ವಾತಂತ್ರ್ಯ ನೀಡುತ್ತಿಲ್ಲ. ಮೈಸೂರಿನಲ್ಲಿ ಪೊಲೀಸ್ ಠಾಣೆ ಮೇಲೆ ದಾಳಿ ನಡೆಸಲಾಗಿದೆ. ಸರಕಾರ ಒಂದು ಕೋಮು, ಮತದವರಿಗೆ ಸೀಮಿತವಾದಂತೆ ಕೆಲಸ ಮಾಡುತ್ತಿದೆ. ಸಿಎಎ ಗಲಭೆ ವೇಳೆ ಅಂದಿನ ಬಿಜೆಪಿ ಸರಕಾರ ಪೊಲೀಸರ ಪರವಾಗಿತ್ತು. ಗಲಭೆಯನ್ನು ಯಶಸ್ವಿಯಾಗಿ ನಿಭಾಯಿಸಿತ್ತು. ಆದರೆ, ಇತ್ತೀಚೆಗೆ ಪೊಲೀಸ್ ಇಲಾಖೆ ಬಗ್ಗೆ ಭಯವೇ ಇಲ್ಲದ ವಾತಾವರಣ ಸೃಷ್ಟಿಯಾಗಿದೆ. ಕೋಟೆಕಾರ್‌ನಲ್ಲಿ ಬ್ಯಾಂಕ್ ದರೋಡೆ ಪ್ರಕರಣ ಈ ಹಿಂದಿನ ಬಿಹಾರವನ್ನು ನೆನಪಿಸುವಂತಿದೆ. ಕರ್ನಾಟಕ ಈಗ ಹಿಂದಿನ ಬಿಹಾರಆಗುತ್ತಿದೆ ಎಂದು ಆರೋಪಿಸಿದರು.

# ಗ್ಯಾರಂಟಿ ಯೋಜನೆಗಳ ಅರ್ಜಿ ವಿಲೇವಾರಿ ಶಿಬಿರ

ಮಂಗಳೂರು – ಕರ್ನಾಟಕ ಸರ್ಕಾರದ ಗ್ಯಾರಂಟಿ ಯೋಜನೆಗಳು ಅನುಷಾನಗೊಂಡಿದ್ದು, ವಿವಿಧ ಕಾರಣಗಳಿಂದಾಗಿ ಯೋಜನೆಯ ಸಮರ್ಪಕ ಅನುಷ್ಠಾನ ಹಾಗೂ ಸೌಲಭ್ಯಗಳನ್ನು ಪಡೆಯುವಲ್ಲಿ ಫಲಾನುಭವಿಗಳಿಗೆ ಸಮಸ್ಯೆಗಳು ಉಂಟಾಗಿದ್ದಲ್ಲಿ ಅವುಗಳ ಬಗ್ಗೆ ಅಹವಾಲುಗಳನ್ನು ಸ್ವೀಕರಿಸಲು ಶಿಬಿರವನ್ನು ಆಯೋಜಿಸಲಾಗಿದೆ ಎಂದು ತಾಲೂಕು ಮಟ್ಟದ ಗ್ಯಾರಂಟಿ ಅಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಲೇ ತುಳು ಓದುಗ ಅಭಿಯಾನ

ಮಂಗಳೂರು – ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯು ಯುವಜನರಲ್ಲಿ ತುಳು ಸಾಹಿತ್ಯ ಓದಿನ ಅಭಿರುಚಿ ಮೂಡಿಸಲು ಹಮ್ಮಿಕೊಂಡಿರುವ 'ಅಕಾಡೆಮಿಡ್ ಒಂಜಿ ದಿನ ; ಬಲೆ ತುಳು ಓದುಗ' ಅಭಿಯಾನದ ಮೂರನೇ ಕಾರ್ಯಕ್ರಮ ಫೆ.27ರಂದು ಬೆಳಿಗ್ಗೆ 10 ಗಂಟೆಗೆ ನಡೆಯಲಿದೆ. ಮಂಗಳೂರು ರಥಬೀದಿಯ ಡಾ.ಪಿ.ದಯಾನಂದ ಪೈ-ಪಿ. ಸತೀಶ್ ಪೈ ಸರಕಾರಿ ಪ್ರಥಮ ದರ್ಜೆ ಕಾಲೇಜಿನ 40 ವಿದ್ಯಾರ್ಥಿಗಳು ಉರ್ವಾಸ್ಟೋರ್‌ನಲ್ಲಿರುವ ತುಳು ಭವನದ ಗ್ರಂಥಾಲಯಕ್ಕೆ ಭೇಟಿ ನೀಡಿ ಅಧ್ಯಯನ ಹಾಗೂ ಸಂವಾದ ನಡೆಸುವರು.

# ಟೆಕ್ನಿಕಲ್ ಆಫೀಸರ್ ಹುದ್ದೆ ನೇಮಕಕ್ಕೆ ಅರ್ಜಿ ಆಹ್ವಾನ

ಶಿವಮೊಗ್ಗ : ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕೆಎಸ್‌ಎಪಿಎಸ್ ವತಿಯಿಂದ ವೈರಲ್ ಲೋಡ್ ಲ್ಯಾಬೋರೇಟರಿ ಮಂಜೂರಾಗಿದ್ದು ಈ ವಿಭಾಗಕ್ಕೆ ಅವಶ್ಯವಿರುವ ಟೆಕ್ನಿಕಲ್ ಅಧಿಕಾರಿ ಹುದ್ದೆಯನ್ನು ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ www.sims_shimoga.comನಲ್ಲಿ ಪಡೆಯತಕ್ಕದ್ದು. ಭರ್ತಿ ಮಾಡಿದ ಅರ್ಜಿಯನ್ನು ಅಗತ್ಯ ದಾಖಲೆಗಳೊಂದಿಗೆ ನಿರ್ದೇಶಕರು ಮತ್ತು ಡೀನ್ ಶಿವಮೊಗ್ಗ, ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಇವರ ಹೆಸರಿಗೆ ಪಡೆದಿರುವ ರೂ.1000 ಡಿಡಿ ಯೊಂದಿಗೆ ನಿರ್ದೇಶಕರು ಮತ್ತು ಡೀನ್ ಶಿವಮೊಗ್ಗ, ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಸಾಗರ ರಸ್ತೆ, ಶಿವೊಗ್ಗ 577201 ಈ ವಿಳಾಸಕ್ಕೆ ಸಲ್ಲಿಸಬೇಕು.

# ಲಾಟರಿ ಮೂಲಕ ಮನೆ ಹಂಚಿಕೆ !

ಶಿವಮೊಗ್ಗ : ಶಿವಮೊಗ್ಗ ಸಮೀಪದ ಗೋವಿಂದಾಪುರದಲ್ಲಿ 46 ಎಕರೆ ವಿಶಾಲ ಭೂಪ್ರದೇಶದಲ್ಲಿ ಸುಮಾರು 261.00ಕೋಟಿ ರೂ.ಗಳ ವೆಚ್ಚದಲ್ಲಿ ಪ್ರಧಾನಮಂತ್ರಿ ಆವಾಸ್‌ಯೋಜನೆಯಡಿ ಜಿ+2 ಮಾದರಿಯಲ್ಲಿ ನಿರ್ಮಿಸಲು ಉದ್ದೇಶಿಸಿದ್ದ 300ಮನೆಗಳ ಪೈಕಿ 652ಮನೆಗಳನ್ನು ಇಂದು ರಾಜ್ಯ ವಸತಿ, ವಕ್ಫತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹಮದ್ ಖಾನ್ ಅವರು ಫಲಾನುಭವಿಗಳಿಗೆ ಮನೆಯ ಕೀಯನ್ನು ಹಸ್ತಾಂತರಿಸಿದರು. ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮಹಾನಗರಪಾಲಿಕೆ ಶಿವಮೊಗ್ಗ ಇವರ ಸಂಯುಕ್ತಾಶ್ರಯದಲ್ಲಿ ಗೋವಿಂದಾಪುರದಲ್ಲಿ ಏರ್ಪಡಿಸಲಾಗಿದ್ದ ಫಲಾನುಭವಿಗಳಿಗೆ ಲಾಟರಿ ಮೂಲಕ ಮನೆಗಳ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು.

# ಬ್ಯಾಂಕ್ ನೇಮಕಾತಿ ಪರೀಕ್ಷೆಗಳಿಗೆ ಉಚಿತ ತರಬೇತಿ

ಮಡಿಕೇರಿ : ಪ್ರತೀ ವರ್ಷವೂ ಬ್ಯಾಂಕಿಂಗ್ ಕ್ಷೇತ್ರದಲ್ಲಿ 40 ರಿಂದ 50 ಸಾವಿರ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗುವುದು. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕೆಲಸದ ಭದ್ರತೆಯೊಂದಿಗೆ ಉತ್ತಮ ಸಂಬಲ ನೀಡಲಾಗುತ್ತದೆ. ಯಾವುದೇ ಪದವಿ ಮುಗಿಸಿರುವ ವಿದ್ಯಾರ್ಥಿಗಳು ಈ ಬ್ಯಾಂಕ್ ನೇಮಕಾತಿ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸಲಾಗುವುದು. ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ 8660217739ಕ್ಕೆ ಕರೆ ಅಥವಾ ವಾಟ್ಸಾಪ್ ಮಾಡಬಹುದು ಎಂದು ಶಾಖೆಯ ಗೌರವ ಕಾರ್ಯದರ್ಶಿ ಹೆಚ್.ಪಿ.ಮೋಹನ್ ಅವರು ತಿಳಿಸಿದ್ದಾರೆ.

# ರೇಶನಿಂಗ್ ಅನಿವಾರ್ಯತೆ ಬಾರದು: ಮೇಯರ್




ಮಂಗಳೂರು : ಮಂಗಳೂರಿಗೆ ನೀರುಣಿಸುವ ತುಂಬೆ ವೆಂಟೆಡ್‌ಡ್ಯಾಂನಲ್ಲಿ ಇನ್ನೆರಡು ತಿಂಗಳಿಗೆ ಬೇಕಾಗುವಷ್ಟು ನೀರು ಸಂಗ್ರಹವಿದೆ. ಮಳೆಯ ನಿರೀಕ್ಷೆಯೂ ಇರುವ ಕಾರಣ ನೀರು ರೇಶನಿಂಗ್ ಮಾಡುವ ಅನಿವಾರ್ಯತೆ ಬಾರದು ಎಂದು ಮೇಯರ್ ಮನೋಜ್ ಕುಮಾರ್ ತಿಳಿಸಿದರು. ತುಂಬೆಯಲ್ಲಿರುವ ಕಿಂಡಿ ಅಣೆಕಟ್ಟಿನ ಬಳಿ ನೇತ್ರಾವತಿ ನದಿಗೆ ಗಂಗಾಪೂಜೆ ನಡೆಸಿ, ಬಾಗಿನ ಅರ್ಪಿಸಿ ಬಳಿಕ ನಡೆದ ಸಭಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ನೇತ್ರಾವತಿ ನದಿಯು ನಮ್ಮೆಲ್ಲರಿಗೆ ನೀರುಣಿಸುವ ನಂಬಿಕೆಯ ಜೀವನದಿ. ಕಳೆದ ವರ್ಷವೂ ನೀರಿನ ಸಮಸ್ಯೆ ಉಂಟಾಗಿರಲಿಲ್ಲ. ನೀರು ರೇಶನಿಂಗ್ ಮಾಡಬೇಕಾದರೆ ಮಾತ್ರ ಸರಬರಾಜಿನಲ್ಲಿ ಸಮಸ್ಯೆ ಉಂಟಾಗಬಹುದು. ಆದರೆ, ಈಗಿನ ಪರಿಸ್ಥಿತಿ ಗಮನಿಸಿದಾಗ ಈ ಬಾರಿ ನೀರು ರೇಶನಿಂಗ್ ಮಾಡುವ ಅಗತ್ಯವಿಲ್ಲ. ಡ್ಯಾಂನ ಕೆಳಭಾಗದಿಂದ ನೀರೆತ್ತುವ ಅವಕಾಶವೂ ಇದೆ ಎಂದರು.

# ನಗರ ಪೌರ ಸಮಿತಿಯಿಂದ ವಿನೂತನ ಪ್ರತಿಭಟನೆ




ಮಂಗಳೂರು : ಕಳೆದ ಐದು ವರ್ಷಗಳಿಂದ ಮಂಗಳೂರು ಮಹಾನಗರ ಪಾಲಿಕೆಯ ಬಿಜೆಪಿ ಆಡಳಿತ ನಾಗರಿಕರನ್ನು ದುಸ್ವಪ್ನದಂತೆ ಬಿಜೆಪಿ ಕಾಡಿದೆ ಎಂದು ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಮುನೀರ್ ಕಾಟಿಪಳ್ಳ ಆರೋಪಿಸಿದ್ದಾರೆ. ಮಂಗಳೂರು ನಗರ ಪೌರ ಸಮಿತಿಯಿಂದ ಲಾಲ್ ಬಾಗ್ನ ಪಾಲಿಕೆ ಕಚೇರಿ ಎದುರು ಐದು ವರ್ಷಗಳ ಬಿಜೆಪಿ ದುರಾಡಳಿತದ ವಿರುದ್ಧ 'ನಾಗರಿಕ ಆರೋಪ ಪಟ್ಟಿ' (ಸಿಟಿಝುನ್ ಚಾರ್ಜ್ ಶೀಟ್) ಎಂಬ ವಿನೂತನ ಪ್ರತಿಭಟನೆಯಲ್ಲಿ 16 ಪ್ರಮುಖ ಆರೋಪಗಳನ್ನು ಬಿಡುಗಡೆಗೊಳಿಸಿ ಮಾತನಾಡುತ್ತಿದ್ದರು. ಸಿಪಿಐ ಜಿಲ್ಲಾ ಕಾರ್ಯದರ್ಶಿ ಬಿ. ಶೇಖರ್, ಆಮ್ ಆದ್ಮಿ ಪಕ್ಷದ ಜಿಲ್ಲಾ ಮುಖಂಡ ಎಸ್. ಎಲ್. ಪಿಂಟೋ ಮೊದಲಾದವರು ಮಾತನಾಡಿ, ಮನಪಾದ ಬಿಜೆಪಿ ಆಡಳಿತದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

# ಪಿಂಚಣಿ ಖಾತ್ರಿಗೆ ಸಿಐಟಿಯು ಪ್ರತಿಭಟನೆ




ಮಂಗಳೂರು: ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಾಗಿ ದುಡಿದು 60 ವರ್ಷ ಪೂರ್ಣವಾದ ನಂತರದಲ್ಲಿ ಪಡೆಯುವ ಪಿಂಚಣಿಯು ಸಮಯಕ್ಕೆ ಸರಿಯಾಗಿ ಲಭಿಸದೆ ಕಾರ್ಮಿಕರು ತೊಂದರೆ ಅನುಭವಿಸುವಂತಾಗಿದೆ. ಸುಮಾರು 20 ತಿಂಗಳಿನಿಂದ ಪಿಂಚಣಿಗಾಗಿ ಅರ್ಜಿ ಹಾಕಿ ಮಂಜೂರು ಆದೇಶ ನೀಡಿದ್ದರೂ ಕೂಡ ಪಿಂಚಣಿ ಲಭಿಸುತ್ತಿಲ್ಲ. ಕಲ್ಯಾಣ ಮಂಡಳಿಯಲ್ಲಿರುವ ನಿಧಿಯನ್ನು ವಿವಿಧ ಕಿಟ್ ಯೋಜನೆಗಳಿಗೆ ದುರ್ಬಳಕೆ ಮಾಡಲಾಗುತ್ತಿದೆ ಎಂದು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಶನ್‌ನ ದ.ಕ.ಜಿಲ್ಲಾಧ್ಯಕ್ಷ ವಸಂತ ಆಚಾರ್ಯ ಹೇಳಿದರು. ಪಿಂಚಣಿದಾರರ ಸಂಘಟನೆಯ ಮುಖಂಡರಾದ ರಾಮಚಂದ್ರ ಪಜೀರ್, ದಿನೇಶ್ ಶೆಟ್ಟಿ ಜಪ್ಪಿನಮೊಗರು, ಯಶೋದ ಮಳಲಿ, ರೋಹಿದಾಸ್ ಭಟ್ಟನಗರ, ಅಶೋಕ್ ಶ್ರೀಯಾನ್ ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ಹಿರಿಯ ಕಾರ್ಮಿಕ ಅಧಿಕಾರಿ ವಿಲ್ಮಾಡಿ ಸೋಜ ಪ್ರತಿಭಟನಾಕಾರರ ಮನವಿ ಸ್ವೀಕರಿಸಿದರು.

# ಶರಣಾದ ನಾಲ್ವರು ನಕ್ಸಲರು ಪೊಲೀಸ್ ಕಸ್ಟಡಿಗೆ



ಕಾರ್ಕಳ : ಇತ್ತೀಚೆಗೆ ಶರಣಾದ ನಕ್ಸಲರ ಪೈಕಿ ನಾಲ್ವರನ್ನು ಕಾರ್ಕಳ ಉಪವಿಭಾಗ ವ್ಯಾಪ್ತಿಯ ವಿವಿಧ ಪ್ರಕರಣಗಳಿಗೆ ಸಂಬಂಧಿಸಿ ಇಂದು ಕಾರ್ಕಳ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ಹೆಚ್ಚಿನ ತನಿಖೆಗಾಗಿ ಇವರನ್ನು ಮೂರು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ಪಡೆದುಕೊಳ್ಳಲಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಕಳಸಾದ ಎಂ.ವನಜಾಕ್ಷಿ ಯಾನೆ ಜ್ಯೋತಿ ಯಾನೆ ಕಲ್ಪನ(58), ಬೆಳ್ತಂಗಡಿಯ ಕುತ್ಲೂರಿನ ಸುಂದರಿ ಯಾನೆ ಗೀತಾ ಯಾನೆ ಜೆನ್ನಿ(40), ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ಬಾಳೆಗೆರೆಯ ಮುಂಡಗಾರು ಲತಾ ಯಾನೆ ಲೋಕಮ್ಮ ಯಾನೆ ಶ್ಯಾಮಲ(45), ರಾಯಚೂರು ಜಿಲ್ಲೆಯ ಮಾನವಿಯ ಜಾನ್ ಯಾನೆ ಜಯಣ್ಣ ಯಾನೆ ಮಹೇಶ್ ಯಾನೆ ಮಾರಪ್ಪ (49) ಪೊಲೀಸ್ ಕಸ್ಟಡಿಗೆ ಪಡೆದ ಆರೋಪಿಗಳು.

# ಉಡುಪಿ ಮಹಾ ನಗರಪಾಲಿಕೆ ಮೇಲ್ದರ್ಜೆಗೆರಿಕೆಗೆ ಪ್ರಸ್ತಾಪ



ಉಡುಪಿ : ಉಡುಪಿ ನಗರಸಭೆಯನ್ನು ಮಹಾನಗರಪಾಲಿಕೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾಪಕ್ಕೆ ಸಂಬಂಧಿಸಿ, ಹೊಸದಾಗಿ ಸೇರ್ಪಡೆಗೊಳ್ಳಲಿರುವ ಗ್ರಾಪಂಗಳ ಪೈಕಿ ಕೆಮ್ಮಣ್ಣು ಹೊರತು ಪಡಿಸಿದ್ದು, ಉಳಿದ ಎಂಟು ಗ್ರಾಪಂಗಳು ಸೇರ್ಪಡೆಗೊಳ್ಳಲು ಒಪ್ಪಿಗೆ ಸೂಚಿಸಿವೆ. ಉಡುಪಿ ನಗರಸಭೆ ಅಧ್ಯಕ್ಷ ಪ್ರಭಾಕರ ಪೂಜಾರಿ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯಸಭೆಯಲ್ಲಿ ಪೌರಾಯುಕ್ತ ಡಾ.ಉದಯ ಕುಮಾರ್ ಶೆಟ್ಟಿ ಈ ಕುರಿತು ಮಾಹಿತಿ ನೀಡಿದರು. ಈ ಬಗ್ಗೆ ನಿರ್ಣಯ ಮಾಡಿ ರಾಜ್ಯ ಸರಕಾರಕ್ಕೆ ಪ್ರಸ್ತಾವ ಕಳುಹಿಸಲಾಗುವುದು. ಕೆಮ್ಮಣ್ಣು ಗ್ರಾಪಂ ಹೊರತು ಪಡಿಸಿ ಉಳಿದ ಗ್ರಾಪಂ ಸೇರಿ ಒಟ್ಟು 3.80ಲಕ್ಷ ಜನಸಂಖ್ಯೆ ಇದ್ದು, ಇದರಿಂದ ಮಹಾನಗರಪಾಲಿಕೆಯಾಗಿ ಮೇಲ್ದರ್ಜೆ ಗೇರಿಸಲು ಯಾವುದೇ ಸಮಸ್ಯೆ ಇಲ್ಲ. ಮಹಾನಗರ ಪಾಲಿಕೆಯಿಂದಾಗಿ ಸ್ಮಾರ್ಟ್ ಸಿಟಿ ಯೋಜನೆ ಅನುಷ್ಠಾನಗೊಳಿಸಬಹುದು ಮತ್ತು ಹೆಚ್ಚುವರಿ ಅನುದಾನ ಬರಲಿದೆ ಎಂದು ತಿಳಿಸಿದರು.

# ಸಂಶಯಾಸ್ಪದವಾಗಿ ಸಂಚರಿಸುತ್ತಿದ್ದ ವಿದೇಶಿ ಬೋಟ್ ವಶಕ್ಕೆ




ಮಲ್ಪೆ : ಮಲ್ಪೆ ಸೈಂಟ್ ಮೇರಿಸ್ ದ್ವೀಪದ ಬಳಿ ಸಂಶಯಾಸ್ಪದವಾಗಿ ಸಂಚರಿಸುತ್ತಿದ್ದ ವಿದೇಶಿ ಬೋಟನ್ನು ಕರಾವಳಿ ಕಾವಲು ಪೊಲೀಸ್ (ಸಿಎಸ್ಪಿ) ಹಾಗೂ ಮಂಗಳೂರು ಕೋಸ್ಟ್ ಗಾರ್ಡ್ ವಶಕ್ಕೆ ಪಡೆದುಕೊಂಡಿದ್ದು, ಅದರಲ್ಲಿದ್ದ ಮೂವರು ತಮಿಳುನಾಡು ಮೂಲದ ಮೀನುಗಾರರನ್ನು ಬಂಧಿಸಲಾಗಿದೆ. ಬಂಧಿತರನ್ನು ಭಾರತೀಯ ಮೂಲದ ತಮಿಳುನಾಡು ನಿವಾಸಿಗಳೆನ್ನಲಾದ ಜೇಮ್ಸ್ ಫ್ರಾಂಕ್ಲಿನ್(50), ರಾಬಿನ್ ಸ್ಟನ್(50), ಡಿರೋಸ್ ಅಲ್ಫೋನ್ಸ (38) ಎಂದು ಗುರುತಿಸಲಾಗಿದೆ. ಈ ಮೀನುಗಾರಿಕಾ ಬೋಟು ಒಮಾನ್ ದೇಶಕ್ಕೆ ಸೇರಿದ್ದು, ಇದರಲ್ಲಿದ್ದ 3 ಜನರನ್ನು ವಶಕ್ಕೆ ಪಡೆಯಲಾಗಿದೆ. ಈ ಮೀನುಗಾರಿಕಾ ಬೋಟನ್ನು ಇಂಡಿಯನ್ ಕೋಸ್ಟ್ ಗಾರ್ಡ್, ಕರಾವಳಿ ಕಾವಲು ಪೊಲೀಸ್, ಕೇಂದ್ರ ಗುಪ್ತಚರ ದಳ, ಕಸ್ಟಮ್ಸ್, ಶ್ವಾನ ದಳ ಮತ್ತು ಬೆರಳಚ್ಚು ತಜ್ಞರು ಜಂಟಿ ಪರಿಶೀಲನೆ ನಡೆಸಿದ್ದು, ಇದರಲ್ಲಿ ಯಾವುದೇ ಸಂಶಯಾಸ್ಪದ ವಸ್ತುಗಳು ದೊರೆತಿರುವುದಿಲ್ಲ ಎಂದು ತಿಳಿದು ಬಂದಿದೆ.

# ಕಾವೂರು ಮಹಾಲಿಂಗೇಶ್ವರನ ಸನ್ನಿಧಿಯಲ್ಲಿ ಅಷ್ಟಬಂಧ ಬ್ರಹ್ಮಕಲಶೋತ್ಸವ




ಮಂಗಳೂರು: ಸುಮಾರು ಎಂಟುನೂರು ವರ್ಷಗಳ ಇತಿಹಾಸ ಹೊಂದಿರುವ ಕಾವೂರು ಶ್ರೀ ಮಹಾಲಿಂಗೇಶ್ವರನ ಸನ್ನಿಧಿಯಲ್ಲಿ ಮಾರ್ಚ್ 6ರಂದು ಬೆಳಗ್ಗೆ ಗಂಟೆ 11ರಿಂದ 12ರ ವರೆಗೆ ನವೀಕೃತ ಗರ್ಭಗೃಹದಲ್ಲಿ ಮಹಾಲಿಂಗೇಶ್ವರ ದೇವರ ಪುನಃ ಪ್ರತಿಷ್ಠಾಪನಾ ಕಾರ್ಯಕ್ರಮ ನಡೆಯಲಿದ್ದು, ಮಾರ್ಚ್ 9ರಂದು ಬೆಳಗ್ಗೆ 8:10ರಿಂದ 8:40ರ ಮೀನಲಗ್ನದ ಸುಮುಹೂರ್ತದಲ್ಲಿ ಮಹಾಲಿಂಗೇಶ್ವರ ದೇವರಿಗೆ ಬ್ರಹ್ಮಕಲಶಾಭಿಷೇಕವು ಜರುಗಲಿದೆ ಎಂದು ಬ್ರಹ್ಮಕಲಶೋತ್ಸವ ಸಮಿತಿ ಗೌರವಾಧ್ಯಕ್ಷ ಅಜಿತ್ ಕುಮಾರ್ ರೈ ಮಾಲಾಡಿ ಹೇಳಿದರು.

# ಮಚ್ಚಿಮಲೆ ಬಲ್ನಾಡು ರಸ್ತೆಗೆ ಕಿಶೋರ್ ಕುಮಾರ್ ಪುತ್ತೂರು ಭೇಟಿ



ಪುತ್ತೂರು : ತಾಲೂಕಿನ ಮಚ್ಚಿಮಲೆ ಬಲ್ನಾಡು ರಸ್ತೆಯಲ್ಲಿ ಹಿಂದಿನ ಮಳೆಗಾಲದಲ್ಲಿ ಗುಡ್ಡ ಕುಸಿತದಿಂದ ಅನಾಹುತದಿಂದಾದ ರಸ್ತೆ ಹಾನಿಯಾದ ಸ್ಥಳಕ್ಕೆ ಭೇಟಿ ನೀಡಿ ಯಾವ ರೀತಿಯಾಗಿ ರಸ್ತೆ ಸರಿಪಡಿಸಿ ಶಾಶ್ವತ ಪರಿಹಾರ ನೀಡಬಹುದು ಎಂಬ ಬಗ್ಗೆ ಪರಿಶೀಲನೆ ನಡೆಸಿದ ವಿಧಾನ ಸಭಾ ಸದಸ್ಯ ಕಿಶೋರ್ ಕುಮಾರ್ ಪುತ್ತೂರು ಮಚ್ಚಿಮಲೆ ನಿವಾಸಿಗಳ ಮನವಿ ಸ್ವೀಕರಿಸಿದರು. ಇದೇ ವೇಳೆ ಕುಂಜೂರು ದುರ್ಗಾಪರಮೇಶ್ವರಿ ದೇವಸ್ಥಾನಕ್ಕೆ ತೆರಳುವ ರಸ್ತೆಯಲ್ಲಿ ಇರುವ ಶಿಥಿಲವಾದ ಬ್ರಿಡ್ಜ್ ಹಾಗೂ ತೋಡಿನ ಬದಿಯಲ್ಲಿ ಕಾಲುದಾರಿ ಸವಕಳಿ ಉಂಟಾಗಿರುವುದನ್ನು ವೀಕ್ಷಣೆ ಮಾಡಿ ಸ್ಥಳಿಯರ ಮನವಿಯನ್ನು ಸ್ವೀಕರಿಸಿ ಸರಕಾರದಿಂದ ಸೂಕ್ತ ಹಾಗೂ ಶಾಶ್ವತವಾದ ಪರಿಹಾರ ಕಾರ್ಯ ಮಾಡುವ ಬಗ್ಗೆ ಭರವಸೆ ನೀಡಿದ್ದಾರೆ.

# ಕಮ್ಯುನಿಸ್ಟ್ ಪ್ರಣಾಳಿಕೆ ಇಂದಿಗೂ ಪ್ರಸ್ತುತ-ಸುಕುಮಾರ್ ತೊಕ್ಕೋಟ್ಟು



ಮಂಗಳೂರು: ಪ್ರಪಂಚದಲ್ಲಿ ಅತೀ ಹೆಚ್ಚು ಮುದ್ರಿತವಾಗಿರುವ ಪುಸ್ತಕಗಳ ಪೈಕಿ ಕಮ್ಯುನಿಸ್ಟ್ ಪ್ರಣಾಳಿಕೆ ಮೂರನೆಯ ಸ್ಥಾನವನ್ನು ಹೊಂದಿದೆ. ಕಾರ್ಲ್ ಮಾರ್ಕ್ಸ್ ಹಾಗೂ ಎಂಗೆಲ್ಸ್‌ರವರ ಕಮ್ಯುನಿಸ್ಟ್ ಪ್ರಣಾಳಿಕೆ ಸಮಾಜವನ್ನು ಅಮೂಲಾಗ್ರವಾಗಿ ಬದಲಾಯಿಸುವ ವೈಜ್ಞಾನಿಕ ಪುಸ್ತಕವಾಗಿದೆ. ಹಾಗೂ ಅದು ಪ್ರಕಟವಾದ ದಿನವಾದ 1848ರ ಫೆಬ್ರವರಿ 21ನ್ನು ಅಂತರಾಷ್ಟ್ರೀಯ ಕೆಂಪು ಪುಸ್ತಕ ದಿನವನ್ನಾಗಿ ಆಚರಿಸಲಾಗುತ್ತಿದೆ. 177 ವರ್ಷಗಳ ಹಿಂದೆ ಪ್ರಕಟವಾದ ಕಮ್ಯುನಿಸ್ಟ್ ಪ್ರಣಾಳಿಕೆಯು ಜ್ಯೋತಿಷ್ಯವೂ ಅಲ್ಲ, ಬ್ರಹ್ಮನ ಕಾಲಜ್ಞಾನವೂ ಅಲ್ಲ. ಅದು ಭವಿಷ್ಯದ ಸೂಚಕವಾಗಿದ್ದು, ಅದರಲ್ಲಿರುವ ಪ್ರತಿಯೊಂದು ಅಂಶಗಳೂ ಇಂದಿಗೂ ಪ್ರಸ್ತುತವಾಗಿದೆ ಎಂದು CPIM ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸುಕುಮಾರ್ ತೊಕ್ಕೋಟ್ಟುರವರು ಅಭಿಪ್ರಾಯಪಟ್ಟರು. ಅವರು ಅಂತರಾಷ್ಟ್ರೀಯ ಕೆಂಪು ಪುಸ್ತಕ ದಿನಾಚರಣೆಯ ಅಂಗವಾಗಿ CPIM ತೊಕ್ಕೋಟ್ಟು ಕಚೇರಿಯಲ್ಲಿ ಜರುಗಿದ ಸಂವಾದ ಕಾರ್ಯಕ್ರಮದಲ್ಲಿ ವಿಚಾರವನ್ನು ಮಂಡಿಸುತ್ತಾ ಈ ಮಾತುಗಳನ್ನು ಹೇಳಿದರು.

# ಮಾಣಿ-ಸಂಪಾಜೆ ಹೈವೇ ಚತುಷ್ಪಥಕ್ಕೆ ಡಿಪಿಆರ್




ಮಂಗಳೂರು: ರಾಷ್ಟ್ರೀಯ ಹೆದ್ದಾರಿ-275ರಲ್ಲಿ ಮಾಣಿಯಿಂದ ಸಂಪಾಜೆವರೆಗಿನ ರಸ್ತೆಯನ್ನು ಚತುಷ್ಪಥವಾಗಿ ವಿಸ್ತರಿಸುವುದಕ್ಕೆ ಸಂಬಂಧಿಸಿ ವಿಸ್ತೃತ ಯೋಜನಾ ವರದಿ(ಡಿಪಿಆರ್) ತಯಾರಿಸುವುದಕ್ಕೆ ಇದೀಗ ರಾಜ್ಯ ಸರ್ಕಾರದಿಂದ ಅನುಮತಿ ದೊರೆತಿರುವುದಾಗಿ ದಕ್ಷಿಣ ಕನ್ನಡ ಸಂಸದ ಕ್ಯಾ. ಬ್ರಿಜೇಶ್ ಚೌಟ ಅವರು ತಿಳಿಸಿದ್ದಾರೆ. ಲೋಕೋಪಯೋಗಿ ಇಲಾಖೆಯ ತುರ್ತು ಸ್ಪಂದನೆಯನ್ನು ಶ್ಲಾಘಿಸಿರುವ ಸಂಸದ ಕ್ಯಾ. ಚೌಟ ಅವರು, ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಬಿ.ಸಿ.ರೋಡ್-ಅಡ್ಡಹೊಳೆ, ಪುಂಜಾಲಕಟ್ಟೆ-ಚಾರ್ಮಾಡಿ ಸೇರಿ ಹಲವು ಪ್ರಮುಖ ರಾಷ್ಟ್ರೀಯ ಹೆದ್ದಾರಿಗಳನ್ನು ಮೇಲ್ದರ್ಜೆಗೇರಿಸುವ ಕಾಮಗಾರಿ ಪ್ರಗತಿಯಲ್ಲಿದೆ. ಇದೀಗಾ ಜಿಲ್ಲೆಯ ಮತ್ತೊಂದು ಹೆದ್ದಾರಿ ಮೇಲ್ದರ್ಜೆಗೇರಿಸುವ ನಿಟ್ಟಿನಲ್ಲಿ ಲೋಕೋಪಯೋಗಿ ಇಲಾಖೆಯಿಂದ ರಾಷ್ಟ್ರೀಯ ಹೆದ್ದಾರಿ ಇಲಾಖೆ ಮುಖ್ಯ ಎಂಜಿನಿಯರ್‌ಗೆ ಅನುಮತಿಯನ್ನು ನೀಡಿ ಆದೇಶ ಬಂದಿರುವುದು ಸಂತಸ ತಂದಿದೆ ಎಂದು ಹೇಳಿದ್ದಾರೆ.

# ಮನಪಾ 180.70 ಕೋಟಿ ರೂಪಾಯಿಗಳ ಮಿಗತೆ ಬಜೆಟ್





ಮಂಗಳೂರು: ಮಂಗಳೂರು ಮಗಾನಗರ ಪಾಲಿಕೆಯಲ್ಲಿ ಮುಂದಿನ 2025-26ನೇ ಸಾಲಿನಲ್ಲಿ 741.25 ಕೋಟಿ ರೂ. ಆದಾಯ ಹಾಗೂ 886.33 ಕೋಟಿ ರೂ. ವೆಚ್ಚ ಹಾಗೂ 180.70 ಕೋಟಿ ರೂ.ಗಳ ಉಳಿಕೆ ನಿರೀಕ್ಷಿಸಲಾಗಿದೆ. ಮಂಗಳೂರು ಮಹಾನಗರ ಪಾಲಿಕೆಯ ಮಂಗಳಾ ಸಭಾಂಗಣದಲ್ಲಿ ಮೇಯರ್ ಮನೋಜ್ ಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ಸಭೆಯಲ್ಲಿ ತೆರಿಗೆ ನಿರ್ಧಾರಣೆ ಮತ್ತು ಅಪೀಲುಗಳ ಸ್ಥಾಯಿ ಸಮಿತಿ ಅಧ್ಯಕ್ಷ ಕದ್ರಿ ಮನೋಹರ ಶೆಟ್ಟಿ ಬಜೆಟ್ ಮಂಡಿಸಿದರು. ಜನಸ್ನೇಹಿ ಆಡಳಿತ ಮತ್ತು ಆರ್ಥಿಕ ಸುಧಾರಣೆಗೆ ಹೆಚ್ಚಿನ ಆದ್ಯತೆ, ಆದಾಯ ಮೂಲಗಳನ್ನು ಗುರುತಿಸಿ ರಾಜಸ್ವ ಕ್ರೋಢೀಕರಣಕ್ಕೆ ಒಳಪಡಿಸುವುದು, ಪರಿಸರ ಮತ್ತು ನೀರಿನ ಸಂರಕ್ಷಣೆಗೆ ಹೆಚ್ಚಿನ ಆದ್ಯತೆ, ಮೂಲ ಸೌಕರ್ಯಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುವುದು, ಪ್ರಗತಿಯಲ್ಲಿರುವ ಕಾಮಗಾರಿಗಳ ಪೂರ್ಣಗೊಳಿಸಲು ಆದ್ಯತೆ ಸ್ವಚ್ಛತೆ ಮತ್ತು ಶುಚಿತ್ವಕ್ಕೆ ಆದ್ಯತೆ, ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಕ್ಕೆ ವಿಶೇಷ ಗಮನ, ನಾಗರಿಕರ ಅಭಿವೃದ್ಧಿಗೆ ವಿಶೇಷ ಕಲ್ಯಾಣ ಕಾರ್ಯಕ್ರಮಗಳ ದೃಷ್ಟಿಕೋನವನ್ನು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ.

# ಆರೋಗ್ಯ, ಶಿಕ್ಷಣ ಪರಿಪೂರ್ಣ ವ್ಯಕ್ತಿಯಾಗಲು ಸಾಧ್ಯ: ಶಾಸಕ ಅಶೋಕ್ ರೈ



ಉಪ್ಪಿನಂಗಡಿ: ಒಬ್ಬ ವ್ಯಕ್ತಿ ಪೂರ್ಣ ಪ್ರಮಾಣದಲ್ಲಿ ಮನುಷ್ಯನಾಗಬೇಕಾದರೆ ಆರೋಗ್ಯ, ಶಿಕ್ಷಣ, ಉದ್ಯೋಗ ಮುಖ್ಯ. ಇದರಲ್ಲಿ ಪ್ರಮುಖವಾಗಿ ಶಿಕ್ಷಣ ಪಡೆದರೆ ಉದ್ಯೋಗ, ಆರೋಗ್ಯ ಎಲ್ಲವೂ ಪ್ರಾಪ್ತಿಯಾಗುತ್ತದೆ. ಶಿಕ್ಷಣ ನಮ್ಮಲ್ಲಿ ಇದ್ದರೆ ನಾವುಗಳು ಯಾವುದಕ್ಕೂ, ಯಾರನ್ನೂ ಅವಲಂಬಿಸಬೇಕಾಗಿಲ್ಲ ಎಂದು ಶಾಸಕ ಅಶೋಕ್ ಕುಮಾರ್ ರೈ ಹೇಳಿದರು. ವಿದ್ಯಾರ್ಥಿಗಳು ತಮ್ಮ ಭವಿಷ್ಯವನ್ನು ತಾವೇ ರೂಪಿಸಿಕೊಳ್ಳಲು ಒಳ್ಳೆಯ ಅವಕಾಶಗಳಿವೆ. ಶಿಕ್ಷಣವನ್ನು ಕೇವಲ ಪದವಿಗೆ ಮಾತ್ರ ಸೀಮಿತಗೊಳಿಸಬೇಡಿ. ಐಎಎಸ್, ಐಪಿಎಸ್, ಇಂಜಿನಿಯರಿಂಗ್, ವೈದ್ಯಕೀಯ ಮೊದಲಾದವುಗಳಲ್ಲದೆ ಇನ್ನಿತರ ಹಲವು ವಿಶೇಷ ಆಸಕ್ತಿಯುತ ಕೋರ್ಸುಗಳಿವೆ. ಇವೆಲ್ಲವುಗಳಿಗೆ ವಿಪುಲ ಅವಕಾಶಗಳಿದ್ದು, ಇದರ ಸದುಪಯೋಗ ಪಡಿಸಿಕೊಂಡು ತಾವುಗಳು ತಮ್ಮ ಜೀವನದ ದಾರಿಯನ್ನು ನೋಡಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

# ಮರಳು ಅಭಾವ ನೀಗಿಸಲು ಜಿಲ್ಲಾಡಳಿತಕ್ಕೆ ಸೂಚನೆ : ಸ್ಪೀಕರ್ ಯು. ಟಿ. ಖಾದರ್




ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೀವ್ರವಾಗಿರುವ ಮರಳು ಅಭಾವ ನೀಗಿಸಲು ಜಿಲ್ಲಾಧಿಕಾರಿ ನೇತೃತ್ವದಲ್ಲಿ ಸಂಬಂಧಿಸಿದ ಇಲಾಖೆಗಳ ಸಮನ್ವಯ ಸಭೆ ನಡೆಸಿ, ಜನರಿಗೆ ಮತ್ತೆ ಕಡಿಮೆ ದರದಲ್ಲಿ ಮರಳು ದೊರೆಯುವಂತೆ ಮಾಡ ಬೇಕು. ಈ ಕುರಿತು ಜಿಲ್ಲಾಡಳಿತಕ್ಕೆ ಸೂಚನೆ ನೀಡಿರುವುದಾಗಿ ವಿಧಾನಸಭೆ ಸ್ಪೀಕರ್ ಯು.ಟಿ. ಖಾದರ್ ಹೇಳಿದ್ದಾರೆ. ಮಂಗಳೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದೆ ನಾನು ಸಚಿವನಾಗಿದ್ದಾಗ 'ಸ್ಯಾಂಡ್ ಬಜಾರ್' ಎಂಬ ಮೊಬೈಲ್ ಆಪ್ ರೂಪಿಸಿ ಅದರ ಮೂಲಕ ನಿಗದಿತ ಸಮಯದಲ್ಲಿ ನಿಗದಿತ ಬೆಲೆಗೆ ಜನರಿಗೆ ಮರಳು ಸಿಗುವಂತೆ ವ್ಯವಸ್ಥೆ ಮಾಡಲಾಗಿತ್ತು. ಸರ್ಕಾರ ಬದಲಾದ ಮೇಲೆ ಆ ವ್ಯವಸ್ಥೆಯನ್ನೇ ನಿಲ್ಲಿಸಲಾಗಿದೆ. ಈಗ ಮರಳಿ ಸ್ಯಾಂಡ್ ಬಜಾರ್ ಆಪ್ ವ್ಯವಸ್ಥೆ ಜಾರಿಯಾಗಬೇಕು ಎಂದರು.

# ಸುದ್ದಿ ತುಣುಕು

ಉತ್ತರಕನ್ನಡದಲ್ಲಿ ಬಿಸಿಲ ಜಳಕ್ಕೆ ಜನ ಕಂಗಾಲಾಗಿದ್ದು, ರಾಜ್ಯದಲ್ಲಿಯೇ ಗರಿಷ್ಠ 41.3 ಡಿಗ್ರಿ ಸೆಲ್ಸಿಯಸ್ ತಾಪಮಾನ ಕಾರವಾರದ ಸಾವಂತವಾಡದಲ್ಲಿ ದಾಖಲಾಗಿದೆ.

ಕೆಲ ದಿನಗಳಲ್ಲೇ ರಾಜ್ಯದಲ್ಲಿ ಅಧಿವೇಶನ ಶುರುವಾಗುತ್ತಿರುವ ಹಿನ್ನೆಲೆಯಲ್ಲಿ ಜೆಡಿಎಸ್ ಹಾಗೂ ಬಿಜೆಪಿ ನಾಯಕರು ಸಭೆ ನಡೆಸಿ, ತಮ್ಮ ಹೋರಾಟದ ಕುರಿತಂತೆ ಚರ್ಚೆ ನಡೆಸಿದರು.

ರಾಜ್ಯದ ಆದ್ಯತಾ ವಲಯಗಳಿಗೆ ಅಗತ್ಯ ಇರುವ ಆರ್ಥಿಕ ನೆರವಿನ ಕುರಿತು ನಬಾರ್ಡ್ ಸಿದ್ಧಪಡಿಸಿರುವ ಆದ್ಯತಾ ಪತ್ರವನ್ನು ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತೆ ಉಮಾ ಮಹಾದೇವನ್ ಅವರು ಬಿಡುಗಡೆಗೊಳಿಸಿದರು.

ಭದ್ರಾ ಅಭಯಾರಣ್ಯದಲ್ಲಿ ಆನೆ ಧಾಮ ನಿರ್ಮಿಸಲು ಅರಣ್ಯ ಇಲಾಖೆ ಯೋಜನೆ ರೂಪಿಸಿದೆ.

ಕಚೇರಿ ಸಮಯ ವಿಸ್ತರಣೆ, ಆದಾಯ ತೆರಿಗೆ ಇಲಾಖೆಯಿಂದ ಮಾಹಿತಿ ಕೋರುವ ನೆಪದಲ್ಲಿ ಕಿರುಕುಳ, ಸಿಬ್ಬಂದಿ ಕೊರತೆ ಸೇರಿದಂತೆ 15 ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಹಮ್ಮಿಕೊಂಡಿದ್ದ ಅನಿರ್ದಿಷ್ಟಾವಧಿ ಮುಷ್ಕರವನ್ನು ಮುಂದೂಡಲಾಗಿದೆ.

ವಿಧಾನಸೌಧದಲ್ಲಿ ಸದ್ಯ 52 ನಾಯಿಗಳಿದ್ದು, ಮರಿಗಳು ಹುಟ್ಟದಂತೆ ಸಂತಾನಹರಣ ಚಿಕಿತ್ಸೆ ನೀಡಲಾಗುತ್ತದೆ ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ತಿಳಿಸಿದರು.

ಸಿಬಿಎಸ್ಇ, 10ನೇ ತರಗತಿಯ ಬೋರ್ಡ್ ಎಕ್ಸಾಂ ಅನ್ನು ವರ್ಷಕ್ಕೆ ಎರಡು ಬಾರಿ ಪರೀಕ್ಷೆ ನಡೆಸಲು ತೀರ್ಮಾನಿಸಿದೆ. ಇದಕ್ಕಾಗಿ ಸಿಬಿಎಸ್ಇ ಸಾರ್ವಜನಿಕವಾಗಿ ಅಭಿಪ್ರಾಯ ಸಂಗ್ರಹಕ್ಕೆ ಮುಂದಾಗಿದೆ.

ಸಂಶೋಧನೆಯಲ್ಲಿ ಹೊಸ ಹೊಸ ಹೆಜ್ಜೆಯನ್ನು ಇಡಲು ಐಐಟಿ ಹೈದರಾಬಾದ್ ಮುಂದಾಗಿದೆ. ಇದಕ್ಕಾಗಿ 2025ರ ವರ್ಷ ಪೂರ್ತಿ ಒಂದೊಂದು ಪೇಟೆಂಟ್ ದಾಖಲಿಸುವ ಉದ್ದೇಶದಿಂದ ಪೇಟೆಂಟ್ 365 ಪ್ರಾರಂಭಿಸಿದೆ.

ತಪ್ಪು ಮಾಹಿತಿಯುಳ್ಳ ಜಾಹೀರಾತು ವಿರುದ್ಧ ಸಲ್ಲಿಕೆಯಾಗಿರುವ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಈ ಬಗ್ಗೆ ಜನರೇ ದೂರು ದಾಖಲಿಸಲು ವಿಶೇಷ ವ್ಯವಸ್ಥೆಯ ಅಗತ್ಯವಿದೆ ಎಂದಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಪಿಎಂ ಕಿಸಾನ್ ಸಮ್ಮಾನ್ ನಿಧಿಯ (ಪಿಎಂ-ಕಿಸಾನ್) 19ನೇ ಕಂತನ್ನು ಕೋಟ್ಯಂತರ ರೈತರ ಖಾತೆಗಳಿಗೆ ಬಿಹಾರದ ಭಾಗಲ್ಪುರ ಜಿಲ್ಲೆಯಿಂದ ವರ್ಗಾಯಿಸಿದರು.

ಇಡ್ಲಿ-ಸಾಂಬಾರ್?, ದಕ್ಷಿಣ ಭಾರತದ ಅಚ್ಚುಮೆಚ್ಚಿನ ಉಪಾಹಾರ. ರುಚಿ ಮತ್ತು ಆರೋಗ್ಯಯುತ ತಿಂಡಿಯು ಗೋವಾದಲ್ಲಿ ವಿದೇಶಿ ಪ್ರವಾಸಿಗರ ಇಳಿಕೆಗೆ ಕಾರಣವಾಗಿದೆಯಂತೆ!. ಇಂಥದ್ದೊಂದು ಆರೋಪವನ್ನು ಅಲ್ಲಿನ ಶಾಸಕರೊಬ್ಬರು ಮಾಡಿದ್ದಾರೆ.

ಅಮೆರಿಕದ ಮಹಿಳಾ ಉದ್ಯಮಿಯೊಬ್ಬರು ವಾರಣಾಸಿಯಲ್ಲಿ ಸನಾತನ ಧರ್ಮ ಸ್ವೀಕರಿಸಿದರು.

ಮಹಾತ್ಮ ಗಾಂಧಿ ಮತ್ತು ಪ್ರತಿಭಟನಾ ನಿರತ ರೈತರ ಕುರಿತ ಮಂಡಿ ಸಂಸದೆ ಕಂಗನಾ ವಿರುದ್ಧ ವಿವಾದಾತ್ಮಕ ಪದ ಬಳಕೆ ಆರೋಪದಡಿ ಪ್ರಕರಣ ದಾಖಲಾಗಿತ್ತು. ಅವರು ಆರನೇ ಬಾರಿಯೂ ಕೋರ್ಟ್‌ಗೆ ಗೈರು ಹಾಜರಾಗಿದ್ದಾರೆ.

ನ್ಯಾಷನಲ್ ಹೆರಾಲ್ಡ್ ಪ್ರಕರಣದ ವಿಚಾರಣೆಯ ತಡೆಯಾಜ್ಞೆಯನ್ನು ಹೈಕೋರ್ಟ್ ವಿಸ್ತರಿಸಿದೆ.

## ಚಿಕನ್ ಸುಕ್ಕ



**ಬೇಕಾಗುವ ಸಾಮಾಗ್ರಿಗಳು :**

ಕೆಜಿ ಚಿಕನ್ – 1 ಕಿಲೊ
ದನಿಯಾ – 2 ಚಮಚ
ಮೆಂತೆ – 1/2 ಚಮಚ
ಅರಿಶಿಣ ಪುಡಿ – ಸ್ವಲ್ಪ
ಕರಿಮೆಣಸು – 1 ಚಮಚ
1 ಚಮಚ ಜೀರಿಗೆ
ಗಸೆಗಸೆ – 1 ಚಮಚ
ಬೆಳ್ಳುಳ್ಳಿ – 5ಎಸಳು
ಹುರಿದ ಬ್ಯಾಡಗಿ ಮೆಣಸಿನ ಕಾಯಿ–10–12
ತುರಿದ ತೆಂಗಿನ ಕಾಯಿ – ಒಂದು ಕಪ್
ಸ್ವಲ್ಪ ಕರಿ ಬೇವಿನ ಎಲೆ
ಈರುಳ್ಳಿ 2
ತುಪ್ಪ 2 ಚಮಚ
ಉಪ್ಪು ರುಚಿಗೆ ತಕ್ಕಷ್ಟು

**ಮಾಡುವ ವಿಧಾನ :**

ಬಾಣಲೆಯಲ್ಲಿ ತುಪ್ಪ ಹಾಕಿ ಬಿಸಿ ಮಾಡಿ ಅದರಲ್ಲಿ ಕರಿಮೆಣಸು, ಮೆಂತೆ, ಕೊತ್ತಂಬರಿ ಬೀಜ, ಗಸೆಗಸೆ, ಜೀರಿಗೆ, ಹಾಕಿ ಹುರಿದು ತಣ್ಣಗಾದ ನಂತರ ಮೆಣಸಿನ ಕಾಯಿ ಮತ್ತು ಅರಿಶಿಣ ಹಾಕಿ ಪುಡಿ ಮಾಡಬೇಕು. ನಂತರ ಈ ಪುಡಿಯನ್ನು ಚಿಕನ್ ಜೊತೆ ಮಿಶ್ರ ಮಾಡಿ ರುಚಿಗೆ ತಕ್ಕ ಉಪ್ಪು ಹಾಕಿ ಕಡಿಮೆ ಉರಿಯಲ್ಲಿ 4 ರಿಂದ 5 ನಿಮಿಷ ಬೇಯಿಸಿ ನಂತರ ತೆಂಗಿನ ಕಾಯಿ ತುರಿ ಹಾಕಿ, ಪಾತ್ರೆಯ ಬಾಯಿ ಮುಚ್ಚಿ ಮತ್ತೆ 4-5 ನಿಮಿಷ ಚಿಕನ್‌ನ್ನು ಬೇಯಿಸಬೇಕು. ಈಗ ಬಾಣಲೆಯನ್ನು ಬಿಸಿ ಮಾಡಿ ಅದಕ್ಕೆ ತುಪ್ಪ ಹಾಕಿ ಅದರಲ್ಲಿ ಕರಿಬೇವಿನ ಎಲೆ ಮತ್ತು ಕತ್ತರಿಸಿದ ಈರುಳ್ಳಿ ಹಾಕಿ, ಈರುಳ್ಳಿ ಕಂದು ಬಣ್ಣಕ್ಕೆ ಬರುವವರೆಗೆ ಹುರಿದು ಅದನ್ನು ತಯಾರಾದ ಚಿಕನ್ ಜೊತೆ ಹಾಕಿ ಮಿಶ್ರ ಮಾಡಿದರೆ ಚಿಕನ್ ಸುಕ್ಕ ಸವಿಯಲು ಸಿದ್ಧ.

# ಬಾಂಗ್ಲಾದೇಶದ ವಾಯುನೆಲೆ ಮೇಲೆ ದಾಳಿ!



ಢಾಕಾ: ಬಾಂಗ್ಲಾದೇಶದಲ್ಲಿ ಅರಾಜಕತೆ ಮತ್ತು ಹಿಂಸಾಚಾರದ ಘಟನೆಗಳು ಮುಂದುವರೆಯುತ್ತಿರುವ ಮಧ್ಯೆ ಹಲವಾರು ದುಷ್ಕರ್ಮಿಗಳು ದೇಶದ ಆಗ್ನೇಯ ಕರಾವಳಿಯ ಕಾಕ್ಸ್ ಬಜಾರ್‌ನಲ್ಲಿರುವ ವಾಯುಪಡೆಯ ನೆಲೆಯ ಮೇಲೆ ದಾಳಿ ನಡೆಸಿದ್ದಾರೆ. ಕಾಕ್ಸ್ ಬಜಾರ್‌ನ ವಾಯುಪಡೆಯ ನೆಲೆಗೆ ಹೊಂದಿಕೊಂಡಿರುವ ಸಮಿತಿ ಪಾರಾ ಪ್ರದೇಶದ ಮೇಲೆ ಕೆಲ ದುಷ್ಕರ್ಮಿಗಳು ಈ ದಾಳಿ ನಡೆಸಿದ್ದಾರೆ ಮತ್ತು ಬಾಂಗ್ಲಾದೇಶ ವಾಯುಪಡೆ ಈ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳುತ್ತಿದೆ ಎಂದು ಬಾಂಗ್ಲಾದೇಶ ಸಶಸ್ತ್ರ ಪಡೆಗಳ ಮಾಧ್ಯಮ ವಿಭಾಗ ಇಂಟರ್-ಸರ್ವೀಸಸ್ ಪಬ್ಲಿಕ್ ರಿಲೇಶನ್ಸ್ (ಐಎಸ್‌ಪಿಆರ್) ಹೇಳಿದೆ.

# ಜರ್ಮನಿ ಹೊಸ ಚಾನ್ಸಲರ್ ಆಗಿ ಫೆಡ್ರಿಕ್ ಮರ್ಜ್

ಬರ್ಲಿನ್: ಜರ್ಮನಿಯ ನೂತನ ಚಾನ್ಸಲರ್ ಆಗಿ ಫೆಡ್ರಿಕ್ ಮರ್ಜ್ ಆಯ್ಕೆಯಾಗಿದ್ದಾರೆ. ಆಯ್ಕೆಗೊಂಡ ಬಳಿಕ ಮಾತನಾಡಿರುವ ಅವರು, ಜರ್ಮನಿಯನ್ನು ಯುರೋಪ್‌ನ ಅತಿದೊಡ್ಡ ಆರ್ಥಿಕತೆಯನ್ನಾಗಿ ಮಾಡುವ ಗುರಿ ಹೊಂದಿರುವುದಾಗಿ ಘೋಷಿಸಿದ್ದಾರೆ. ಅಷ್ಟೇ ಅಲ್ಲ ಅಕ್ರಮ ವಲಸೆಗೆ ನಿರ್ಬಂಧ ಹಾಕುವುದಾಗಿಯೂ ಅವರು ಇದೇ ವೇಳೆ ಘೋಷಣೆ ಮಾಡಿದ್ದಾರೆ. ಈ ಹಿಂದಿನ ಚಾನ್ಸಲರ್ ಮಾರ್ಕೆಲ್ ವಿರುದ್ಧ ವಾಗ್ದಾಳಿ ನಡೆಸಿದ




ಅವರು, ಅವರ ಅಕ್ರಮ ವಲಸೆ ನೀತಿ ಬಗ್ಗೆ ಟೀಕಾಪ್ರಹಾರ ನಡೆಸಿದರು.

# ಗಾಜಾದ ಪರಿಸ್ಥಿತಿ ಸರಿಯಾಗಲ್ಲ: ವಿಶ್ವಸಂಸ್ಥೆ



ಗಾಜಾ: ಹಮಾಸ್ ಉಗ್ರರು ಮತ್ತು ಇಸ್ರೇಲ್ ನಡುವೆ ತಾತ್ಕಾಲಿಕ ಕದನ ವಿರಾಮ ಏರ್ಪಟ್ಟಿದೆ. ಆಶ್ರಯ ತಾಣಗಳಲ್ಲಿದ್ದ ಜನರು ಇದೀಗ, ತಮ್ಮ ತಮ್ಮ ವಾಸಸ್ಥಾನಗಳಿಗೆ ವಾಪಸ್ಸಾಗುತ್ತಿದ್ದಾರೆ. ಆದರೆ, ಅಲ್ಲಿನ ಪರಿಸ್ಥಿತಿ ಹೇಳತೀರದಾಗಿದೆ. ಇಸ್ರೇಲ್‌ನ ದಾಳಿಗೆ ಧರಾಶಾಯಿ ಆಗಿರುವ ಮನೆಗಳು, ಕಟ್ಟಡಗಳು ಥೇಟ್ 'ಸಮಾಧಿ'ಯಂತೆ ಕಾಣುತ್ತಿವೆ. 16 ತಿಂಗಳು ನಡೆದ ಯುದ್ಧದಲ್ಲಿ ಕಟ್ಟಡಗಳ ಸಮೇತ, ನಗರಗಳಿಗೆ ಸರಬರಾಜಾಗುತ್ತಿದ್ದ ನೀರು, ವಿದ್ಯುತ್ ಅಥವಾ ಇನ್ನಿತರ ಸೇವೆಗಳೆಲ್ಲವೂ ಸ್ತಬ್ಧವಾಗಿವೆ.

# ಬಿರುಗಾಳಿ ಎಬ್ಬಿಸಿದ USAID

ಅಮೆರಿಕ : ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ ಆಕ್ರಮಣಶೀಲ ಆಡಳಿತವನ್ನು ಮತ್ತಷ್ಟು ತೀವ್ರಗೊಳಿಸಿದ್ದಾರೆ. ಇತರ ದೇಶಗಳಿಗೆ ಅಮೆರಿಕದ ನೆರವು ನಿಲ್ಲಿಸಿರುವ ಟ್ರಂಪ್, ಇದೀಗ, ಅಮೆರಿಕದ ಅಂತಾರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ (ಯುಎಸ್‌ಏಡ್)ಯ ಉದ್ಯೋಗಿಗಳನ್ನು ಕೆಲಸದಿಂದ ತೆಗೆದುಹಾಕಿದ್ದಾರೆ. ಯುಎಸ್ ಏಡ್ ವೆಬ್‌ಸೈಟ್‌ನಲ್ಲಿ 2 ಸಾವಿರ ಉದ್ಯೋಗಿಗಳನ್ನು ವಜಾಗೊಳಿಸಲಾಗುತ್ತಿದೆ ಎಂದು ಪ್ರಕಟಿಸಲಾಗಿದೆ. ಉದ್ಯೋಗಿಗಳ ವಜಾಕ್ಕೆ



ಕೋರ್ಟ್ ಅನುಮತಿ ನೀಡಿದ ಬೆನ್ನಲ್ಲೇ, ಟ್ರಂಪ್ ಸರ್ಕಾರ ಈ ಕ್ರಮ ಕೈಗೊಂಡಿದೆ.


# ರಷ್ಯಾ ಪರವಾದ ನಿರ್ಣಯಕ್ಕೆ ವಿಶ್ವಸಂಸ್ಥೆಯಲ್ಲಿ ಅಮೇರಿಕ ಮತ



ಅಮೆರಿಕ: ಕಳೆದ ಮೂರು ವರ್ಷಗಳಿಂದ ನಡೆಯುತ್ತಿರುವ ಉಕ್ರೇನ್-ರಷ್ಯಾ ಯುದ್ಧದಲ್ಲಿ ಆರಂಭದಿಂದಲೂ ಅಮೆರಿಕ ಉಕ್ರೇನ್ ಪರ ನಿಂತಿತ್ತು. ಆದರೆ, ಇದೀಗ ನಾಟಕೀಯ ಬೆಳವಣಿಗೆಯಲ್ಲಿ ಅಮೆರಿಕ ವಿಶ್ವಸಂಸ್ಥೆ ನಿರ್ಣಯದಲ್ಲಿ ರಷ್ಯಾದ ಪರ ಹಾಗೂ ನಿರ್ಣಯದ ವಿರುದ್ಧ ಮತ ಹಾಕುವ ಮೂಲಕ ಗಮನ ಸೆಳೆದಿದೆ. ರಷ್ಯಾದ ಜೊತೆ ನೇರ ಮಾತುಕತೆ ಮೂಲಕ ಯುದ್ಧವನ್ನು ಕೊನೆಗಾಣಿಸಲು ಮುಂದಾಗಿರುವ ಟ್ರಂಪ್, ಕಳೆದ ವಾರ ನಡೆದ ಪ್ರಾಥಮಿಕ ಮಾತುಕತೆಯಲ್ಲಿ ಉಕ್ರೇನ್ ಮತ್ತು ಯುರೋಪಿಯನ್ ರಾಷ್ಟ್ರಗಳ ಬೆಂಬಲವನ್ನು ಹೊರಗೆ ಇಟ್ಟು ಚರ್ಚೆ ನಡೆಸಿದ್ದರು.

# ಮತ್ತೊಂದು ಸಾಂಕ್ರಾಮಿಕದ ಭೀತಿ ತರಿಸಿದ ವೈರಸ್

ಚೀನಾ: ವೈರಸ್ ರೀತಿ ಮಾನವನ ಉಸಿರಾಟದ ಮೇಲೆ ಪರಿಣಾಮ ಬೀರುವ ಮತ್ತೊಂದು ಹೊಸ ವೈರಸ್ ಪತ್ತೆಯಾಗಿದ್ದು, ಇದು ಜನರಲ್ಲಿ ಆತಂಕ ಮೂಡಿಸಿದೆ. ಈ ಕುರಿತು ಚೀನಾದ ಬ್ಯಾಟ್ ವುಮೆನ್ ಎಂದೇ ಖ್ಯಾತಿಯಾಗಿರುವ ವೈರಾಲಾಜಿಸ್ಟ್ ಶಿ ಜೆಂಗಾಲಿ ಅಧ್ಯಯನ ನಡೆಸಿದ್ದಾರೆ. HKU5-CoV-2 ಎಂಬ ವೈರಸ್ ಇದಾಗಿದ್ದು, ಇದು ಕೂಡ ಎಸಿಇ2 ಶ್ವಾಸಕೋಶದ ಪ್ರೋಟಿನ್ ಮೂಲಕ ಮಾನವನ



ಕೋಶ ಪ್ರವೇಶಿಸಲಿದೆ. ಈ ಕುರಿತು ಸೈಂಟಿಫಿಕ್ ಜರ್ನಲ್ ಸೆಲ್‌ನಲ್ಲಿ ಪ್ರಕಟಿಸಲಾಗಿದೆ.

# ಪಾಕಿಸ್ಥಾನದ ವಿರುದ್ಧ ಭಾರತಕ್ಕೆ ಭರ್ಜರಿ ಜಯ



ದುಬೈ : ತೀವ್ರ ಕುತೂಹಲ ಮೂಡಿಸಿದ್ದ ಚಾಂಪಿಯನ್ ಟ್ರೋಫಿ ಕ್ರಿಕೆಟ್ ಪಂದ್ಯದಲ್ಲಿ ಭಾರತ ತಂಡ, ಪಾಕಿಸ್ಥಾನ್ ತಂಡದ ವಿರುದ್ಧ ಸುಲಭ ಜಯ ಸಾಧಿಸುವಲ್ಲಿ ಸಫಲವಾಯಿತು. ಇನ್ನೂ 7.3 ಓವರ್‌ಗಳು ಬಾಕಿ ಇರುವಾಗಲೇ ಟೀಂ ಇಂಡಿಯಾ ವಿಜಯ ಸಾಧಿಸಿದ್ದರಿಂದ ದುಬೈನ ಕ್ರೀಡಾಂಗಣದಲ್ಲಿ ನೆರೆದಿದ್ದ ಲಕ್ಷಾಂತರ ಭಾರತದ ಪರ ಕ್ರಿಕೆಟ್ ಅಭಿಮಾನಿಗಳು ಕುಣಿದು ಕುಪ್ಪಳಿಸಿದರು.

# ಬಾಂಗ್ಲಾ ಮಣಿಸಿ ಭಾರತ ಶುಭಾರಂಭ

ದುಬೈ : ಚಾಂಪಿಯನ್ಸ್ ಟ್ರೋಫಿ ಭಾಗವಾಗಿ ನಡೆದ ಬಾಂಗ್ಲಾದೇಶ ವಿರುದ್ಧದ ಪಂದ್ಯದಲ್ಲಿ ಟೀಂ ಇಂಡಿಯಾ 6 ವಿಕೆಟ್‌ಗಳ ಗೆಲುವು ಸಾಧಿಸಿ ಶುಭಾರಂಭ ಮಾಡಿದೆ. ದುಬೈ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬಾಂಗ್ಲಾ ನೀಡಿದ್ದ 228 ರನ್‌ಗಳ ಸಾಮಾನ್ಯ ಗುರಿ ಬೆನ್ನತ್ತಿದ ಭಾರತ 21 ಎಸೆತಗಳು ಬಾಕಿ ಇರುವಂತೆಯೇ ಗೆಲುವಿನ ನಗಾರಿ ಬಾರಿಸಿತು.



# ಸೂಪರ್ ಓವರ್‌ನಲ್ಲಿ ಆರ್‌ಸಿಬಿ ತಂಡಕ್ಕೆ ಸೋಲು




ಬೆಂಗಳೂರು: WPL ಇತಿಹಾಸದಲ್ಲೇ ಮೊದಲ ಸೂಪರ್ ಓವರ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ಯುಪಿ ವಾರಿಯರ್ಸ್ ತಂಡ ಜಯ ದಾಖಲಿಸಿದೆ. ಸೋಮವಾರ ನಡೆದ ರಣರೋಚಕ ಪಂದ್ಯಕ್ಕೆ ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣ ಸಾಕ್ಷಿಯಾಯಿತು. ಡಬ್ಲ್ಯುಪಿಎಲ್‌ನಲ್ಲಿ ಇದೇ ಮೊದಲ ಬಾರಿಗೆ ಸೂಪರ್ ಓವರ್ ಹಂತ ತಲುಪಿದ ಪಂದ್ಯವನ್ನ ಅಂತಿಮವಾಗಿ ಯುಪಿ ವಾರಿಯರ್ಸ್ ತಂಡ 4 ರನ್‌ಗಳಿಂದ ಗೆದ್ದು ಬೀಗಿತು.

# ಲೋಕಾಯುಕ್ತದ ತನಿಖಾ ವರದಿ ತಿರಸ್ಕರಿಸುವಂತೆ ಅರ್ಜಿ–ಸ್ನೇಹಮಯಿ




ಮೈಸೂರು: "ಮುಡಾ ಪ್ರಕರಣದ ಆರೋಪಿಗಳಾದ ಸಿಎಂ ಸಿದ್ದರಾಮಯ್ಯ ಮತ್ತು ಅವರ ಕುಟುಂಬಸ್ಥರ ವಿರುದ್ಧ ತನಿಖೆ ನಡೆಸಿರುವ ಮೈಸೂರು ಲೋಕಾಯುಕ್ತ ಪೊಲೀಸರು, ಕೋರ್ಟ್‌ಗೆ ತನಿಖಾ ವರದಿ ಸಲ್ಲಿಸಿದ್ದಾರೆ. ಈ ವರದಿಯ ಪ್ರತಿಯನ್ನು ಪಡೆದುಕೊಂಡಿದ್ದು, ಕೂಲಂಕಷವಾಗಿ ಪರಿಶೀಲನೆ ನಡೆಸಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಲೋಕಾಯುಕ್ತ ತನಿಖಾ ವರದಿ ತಿರಸ್ಕರಿಸುವಂತೆ ಕೋರಿ ಅರ್ಜಿ ಸಲ್ಲಿಸುತ್ತೇನೆ" ಎಂದು ಮುಡಾ ದೂರುದಾರ ಸ್ನೇಹಮಯಿ ಕೃಷ್ಣ ಅವರು ತಿಳಿಸಿದರು.

# ಹೊನ್ನಾವರದಲ್ಲಿ ರಸ್ತೆ ಸರ್ವೆಗೆ ಜನರ ವಿರೋಧ

ಉತ್ತರ ಕನ್ನಡ : ಜಿಲ್ಲೆಯ ಹೊನ್ನಾವರ ತಾಲೂಕಿನ ಕಾಸರಕೋಡಿನಲ್ಲಿಯೂ ಬಂದರು ನಿರ್ಮಾಣ ಸಂಬಂಧ ಸಂಪರ್ಕ ರಸ್ತೆ ಸಮೀಕ್ಷೆಗೆ ಸ್ಥಳೀಯರಿಂದ ಭಾರೀ ವಿರೋಧ ವ್ಯಕ್ತವಾಗಿದೆ. ಜಿಲ್ಲಾಧಿಕಾರಿ ಆದೇಶ ಉಲ್ಲಂಘನೆ ಹಿನ್ನೆಲೆಯಲ್ಲಿ ಪ್ರತಿಭಟನಾಕಾರರನ್ನು



ಪೊಲೀಸರು ವಶಕ್ಕೆ ಪಡೆದು ಬೇರೆಡೆ ಕರೆದೊಯ್ದಿದ್ದಾರೆ. ಸಮೀಕ್ಷೆಗೆ ಅನುಕೂಲವಾಗುವಂತೆ ಯಾವುದೇ ಅಹಿತಕರ ಘಟನೆ ನಡೆಯದಂತೆ ತಡೆಯಲು ಮುಂಜಾಗ್ರತಾ ಕ್ರಮವಾಗಿ ಜಿಲ್ಲಾಧಿಕಾರಿ ಕೆ.ಲಕ್ಷ್ಮಿಪ್ರಿಯ ನಿಷೇಧಾಜ್ಞೆ ಜಾರಿ ಮಾಡಿ ಆದೇಶಿಸಿದ್ದರು.


# ಮೇಕೆದಾಟು, ಮಹದಾಯಿ, ಭದ್ರಾ ಮೇಲ್ದಂಡೆ ಯೋಜನೆ : ಡಿ.ಕೆ.ಶಿ. ಚರ್ಚೆ

ಬೆಂಗಳೂರು: ರಾಜ್ಯದಲ್ಲಿ ಹಲವಾರು ವರ್ಷಗಳಿಂದ ಅನುಷ್ಠಾನಕ್ಕೆ ತರಲಾಗದೇ ನೆನೆಗುದಿಗೆ ಬಿದ್ದಿರುವ ಮೇಕೆದಾಟು, ಮಹದಾಯಿ, ಭದ್ರಾ ಮೇಲ್ದಂಡೆ ಯೋಜನೆಗಳೂ ಸೇರಿದಂತೆ ಹಲವಾರು ನೀರಾವರಿ ಯೋಜನೆಗಳಿಗೆ ಕೇಂದ್ರ ಸರಕಾರದ ಒಪ್ಪಿಗೆ ಪಡೆಯುವ ಸಂಬಂಧ ಜಲಸಂಪನ್ಮೂಲ ಸಚಿವರಾಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದು ಕೇಂದ್ರ ಜಲಶಕ್ತಿ ಸಚಿವರ ಜೊತೆ ಮಹತ್ವದ ಮಾತುಕತೆ ನಡೆಸಲಿದ್ದಾರೆ. ಮೇಕೆದಾಟು ಯೋಜನೆಗೆ ಕೇಂದ್ರ ಸರಕಾರದ ಅನುಮೋದನೆ ಪಡೆಯುವ ಬಗ್ಗೆ ಪ್ರಮುಖವಾಗಿ ಪ್ರಸ್ತಾಪಿಸಲಾಗುತ್ತದೆ ಎಂದು ಉಪ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ತಿಳಿಸಿದ್ದಾರೆ.



# ಗೃಹಜ್ಯೋತಿಯ ಸಹಾಯಧನ ಎಸ್ಕಾಂಗಳಿಗೆ ಮುಂಗಡ ಪಾವತಿ–ಕೆ.ಜೆ.ಜಾರ್ಜ್

ಬೆಂಗಳೂರು: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಗೃಹಜ್ಯೋತಿಯ ಸಹಾಯಧನವನ್ನು ಎಸ್ಕಾಂಗಳಿಗೆ ಸರ್ಕಾರ ಮುಂಗಡವಾಗಿ ಪಾವತಿಸುತ್ತಿದ್ದು, ಗ್ರಾಹಕರಿಂದ ಹಣ ಪಡೆಯುವ ಯಾವುದೇ ಪ್ರಸ್ತಾಪ ಮುಂದಿಲ್ಲ ಎಂದು ಸರ್ಕಾರ ಸ್ಪಷ್ಟಪಡಿಸಿದೆ. ಇಂಧನ ಸಚಿವ ಕೆ.ಜೆ.ಜಾರ್ಜ್ ಈ ಬಗ್ಗೆ




ವಿವರಣೆ ನೀಡಿ, "ಗೃಹಜ್ಯೋತಿ ಹಣವನ್ನು ಸರ್ಕಾರ ಮುಂಗಡವಾಗಿ ಪಾವತಿಸದಿದ್ದರೆ ಜನರಿಂದ ಪಡೆಯಲು ಕರ್ನಾಟಕ ವಿದ್ಯುತ್ ಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಎಸ್ಕಾಂಗಳು ಮನವಿ ಮಾಡಿವೆ ಎಂಬ ತಪ್ಪು ಕಲ್ಪನೆಯಿಂದ ಸೃಷ್ಟಿಯಾಗಿದೆ. ಸರ್ಕಾರಕ್ಕೆ ಅಂತಹ ಯಾವುದೇ ಉದ್ದೇಶ ಇಲ್ಲ," ಎಂದು ಸ್ಪಷ್ಟಪಡಿಸಿದ್ದಾರೆ.

# ಅರಣ್ಯ ಇಲಾಖೆ ಸ್ವತ್ತು ಅಕ್ರಮ ಸ್ವಾಧೀನ :ಪಿತ್ರೋಡಾ ವಿರುದ್ಧ ದೂರು



ಬೆಂಗಳೂರು: ರಾಜ್ಯ ಅರಣ್ಯ ಇಲಾಖೆಯ 150 ಕೋಟಿ ರೂಪಾಯಿಗಳಿಗೂ ಅಧಿಕ ಮೌಲ್ಯದ ಸ್ವತ್ತನ್ನು ಕಾನೂನುಬಾಹಿರವಾಗಿ ಸ್ವಾಧೀನದಲ್ಲಿರಿಸಿಕೊಂಡಿರುವ ಆರೋಪದಡಿ ಕಾಂಗ್ರೆಸ್‌ನ ಸಾಗರೋತ್ತರ ಘಟಕದ ಅಧ್ಯಕ್ಷ ಸ್ಯಾಮ್ ಪಿತ್ರೋಡಾ ಸೇರಿದಂತೆ ಆರು ಜನರ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ) ಹಾಗೂ ಲೋಕಾಯುಕ್ತದಲ್ಲಿ ದೂರು ದಾಖಲಾಗಿದೆ. ಕರ್ನಾಟಕ ರಾಜ್ಯ ಅರಣ್ಯ ಇಲಾಖೆಯ ಬೆಂಗಳೂರು ನಗರ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಾದ ಎನ್.ರವೀಂದ್ರ ಕುಮಾರ್ ಮತ್ತು ಎಸ್.ಎಸ್.ರವಿಶಂಕರ್ ವಿರುದ್ಧ ಬಿಜೆಪಿ ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷ ಎನ್.ಆರ್.ರಮೇಶ್ ದೂರು ದಾಖಲಿಸಿದ್ದಾರೆ.

# ಐಫೋನ್ ಸೇವಾನ್ಯೂನತೆ: ಸೂಕ್ತ ಪರಿಹಾರ ನೀಡುವಂತೆ ಆದೇಶ

ಶಿವಮೊಗ್ಗ: ಐಫೋನ್‌ನ ಡಿಸ್‌ಪ್ಲೇ ರಿಪ್ಲೇಸ್ ಮಾಡಿಕೊಡದೇ ಸೇವಾನ್ಯೂನತೆ ಕುರಿತು ದಾಖಲಿಸಿದ್ದ ದೂರು ಪುರಸ್ಕರಿಸಿದ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಅರ್ಜಿದಾರರಿಗೆ ಸೂಕ್ತ ಪರಿಹಾರ ನೀಡಲು ಆದೇಶಿಸಿತು. ಅರ್ಜಿದಾರ ವಕೀಲರ ಮೂಲಕ 1ನೇ ಎದುರುದಾರ ಮಾಲೀಕರು/ವ್ಯವಸ್ಥಾಪಕರು, ಐ ಕಾರ್ನರ್-ಕಾರ್ತಿಕ್ ಟೆಕ್ ವರ್ಲ್ಡ್ ಶಾಪ್ ಶಿವಮೊಗ್ಗ, 2ನೇ ಎದುರುದಾರ ಕಸ್ಟಮರ್ ಕಂಪ್ಲೇಂಟ್ ಮ್ಯಾನೇಜರ್ ಆಂಡ್ ಇನ್ಫೋರ್ಟರ್, ಯುಬಿಸಿಟಿ ಬೆಂಗಳೂರು ಮತ್ತು ಸರ್ವೀಸ್ ಮ್ಯಾನೇಜರ್, ಆಪಲ್ ಟೆಕ್ನೋಲಜಿಸ್ ಪ್ರೈ.ಲಿ(ಐ-ಕೇರ್) ಮಲ್ಲೇಶ್ವರಂ ಬೆಂಗಳೂರು ಇವರ ವಿರುದ್ಧ ದೂರಲ್ಸಲ್ಲಿಸಿದ್ದರು.




# ಗಂಗಾ ನದಿ ನೀರು ಪರಿಶುದ್ಧ – ವಿಜ್ಞಾನಿ ಡಾ. ಸೋಂಕರ್

ಪ್ರಯಾಗ್ ರಾಜ್: ಸಂಗಮದಲ್ಲಿರುವ ಗಂಗಾ ನೀರಿನಲ್ಲಿ ಫೆಕಲ್ ಕೋಲಿಫಾರ್ಮ್ ಬ್ಯಾಕ್ಟೀರಿಯಾ ಬೆಳೆಯಲು ಸಾಧ್ಯವಿಲ್ಲ ಎಂದು ಪದ್ಮಶ್ರೀ ಡಾ.ಅಜಯ್ ಸೋಂಕರ್ ತಿಳಿಸಿದ್ದಾರೆ. ಕುಂಭಮೇಳದ ಸಮಯದಲ್ಲಿ ಗಂಗಾ ನೀರಿನ ತಾಪಮಾನವು ಕೇವಲ 10 ರಿಂದ 15 ಡಿಗ್ರಿಗಳ ನಡುವೆ ಮಾತ್ರ ಇತ್ತು. ಆದರೆ ಈ ಬ್ಯಾಕ್ಟೀರಿಯಾವು 20 ಡಿಗ್ರಿಗಿಂತ ಹೆಚ್ಚಿನ ತಾಪಮಾನದಲ್ಲಿ ಬೆಳೆಯುತ್ತದೆ, ಗಂಗಾ ನೀರಿನ ಗುಣಲಕ್ಷಣಗಳು ಮತ್ತು ಪ್ರಸ್ತುತ ತಾಪಮಾನವು ಬ್ಯಾಕ್ಟೀರಿಯಾದ ಬೆಳವಣಿಗೆಗೆ ಸೂಕ್ತವಾಗಿಲ್ಲ ಎಂದು ಅವರು ಹೇಳಿದರು. ಗಂಗಾ ನೀರನ್ನು ಸ್ವತಃ ಕುಡಿದು ತಮ್ಮ ಹೇಳಿಕೆಯನ್ನು ಅವರು ಸಮರ್ಥಿಸಿಕೊಂಡರು.



# ಭಾಷೆಯ ಆಧಾರದಲ್ಲಿ ದೇಶವನ್ನು ಇಬ್ಭಾಗಿಸಲು ಬಯಸುತ್ತಿವೆ –ಅಣ್ಣಾ ಮಲೈ

ಚೆನ್ನೈ : "ಕೆಲವು ರಾಜಕೀಯ ಪಕ್ಷಗಳು ಭಾಷೆಯ ಆಧಾರದಲ್ಲಿ ಇನ್ನೂ ದೇಶವನ್ನು ಇಬ್ಭಾಗಿಸಲು ಬಯಸುತ್ತಿವೆ" ಎಂದು ತಮಿಳುನಾಡು ಭಾರತೀಯ ಜನತಾ ಪಕ್ಷ (ಬಿಜೆಪಿ)ದ ಅಧ್ಯಕ್ಷ ಅಣ್ಣಾಮಲೈ ಟೀಕಿಸಿದ್ದಾರೆ. "ಮಾತೃಭಾಷೆ ಎಲ್ಲರಿಗೂ ಮುಖ್ಯ. 10 ಭಾಷೆಗಳನ್ನು ತಿಳಿದುಕೊಂಡ ಬಳಿಕವೇ ತಮಿಳಿನ ಮಹಾಕವಿ




ಭಾರತಿ ಅವರು ತಮಿಳನ್ನು ಶ್ರೇಷ್ಠ ಭಾಷೆ ಎಂದು ಕರೆದರು. ಹಾಗಾಗಿ, ಜನರು ಹೆಚ್ಚು ಭಾಷೆಗಳನ್ನು ಕಲಿಯಬೇಕು" ಎಂದರು. ಎನ್‌ಇಪಿ ವಿಚಾರವಾಗಿ ಕೆಲವು ರಾಜಕೀಯ ಪಕ್ಷಗಳು ಅನಪೇಕ್ಷಿತ ವಿವಾದ ಎಬ್ಬಿಸುತ್ತಿವೆ ಎಂದು ಆಡಳಿತಾರೂಢ ಡಿಎಂಕೆ ವಿರುದ್ಧ ವಾಗ್ದಾಳಿ ನಡೆಸಿದರು.


# ರೈತರು ಮತ್ತು ಕೇಂದ್ರ ಸರ್ಕಾರದ ಮಾತುಕತೆ ಸೌಹಾರ್ದಯುತ



ಚಂಡೀಗಢ: ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ನೇತೃತ್ವದ ಮೂವರು ಸದಸ್ಯರ ಕೇಂದ್ರ ಸರಕಾರದ ನಿಯೋಗ ಮತ್ತು ಪ್ರತಿಭಟನಾನಿರತ ರೈತ ಸಂಘಟನೆಗಳ ನಡುವಿನ 2ನೇ ಸುತ್ತಿನ ಸಭೆ ಸಕಾರಾತ್ಮಕ ಮತ್ತು ಸೌಹಾರ್ದಯುತ ರೀತಿಯಲ್ಲಿ ಮುಕ್ತಾಯಗೊಂಡಿದೆ. ಚೌಹಾಣ್ ಮಾತನಾಡಿ "ನರೇಂದ್ರ ಮೋದಿ ನೇತೃತ್ವದ ಸರ್ಕಾರವು ರೈತರ ಕಲ್ಯಾಣಕ್ಕೆ ಬದ್ಧವಾಗಿದೆ. ನಾವು ಜಗಜಿತ್ ಸಿಂಗ್ ದಲ್ಲೆವಾಲ್ ಮತ್ತು ಸರ್ವನ್ ಸಿಂಗ್ ಪಂಧೇರ್ ಅವರೊಂದಿಗೆ ಚರ್ಚಿಸಿ ಅಭಿಪ್ರಾಯಗಳನ್ನು ಪಡೆದುಕೊಂಡಿದ್ದೇವೆ. ಮುಂದಿನ ಸಭೆ ಮಾರ್ಚ್ 19ರಂದು ನಡೆಯಲಿದೆ" ಎಂದು ಚೌಹಾಣ್ ತಿಳಿಸಿದರು.

# ರಾಜಸ್ಥಾನ ಕಾಂಗ್ರೆಸ್ ಶಾಸಕರಿಂದ ಅಹೋರಾತ್ರಿ ಧರಣಿ

ರಾಜಸ್ಥಾನ: ಮಾಜಿ ಪ್ರಧಾನಿ ಇಂದಿರಾ ಗಾಂಧಿ ಕುರಿತ ಹೇಳಿಕೆಯು ರಾಜಸ್ಥಾನದ ವಿಧಾನ ಸಭೆಯಲ್ಲಿ ಜಟಾಪಟಿಗೆ ಕಾರಣವಾಗಿದ್ದು, ಕಾಂಗ್ರೆಸ್ ಶಾಸಕರು ಅಹೋರಾತ್ರಿ ಧರಣಿ ನಡೆಸಿದ್ದಾರೆ. ಅಧಿವೇಶನದಲ್ಲಿ ಸಚಿವರ ಹೇಳಿಕೆ ಖಂಡಿಸಿ ಸದನದಲ್ಲಿ ಕೋಲಾಹಲ ನಿರ್ಮಾಣವಾಯಿತು. ಈ ವೇಳೆ ಆರು ಶಾಸಕರನ್ನು



ಸದನದಿಂದ ಅಮಾನತು. ಇದರಿಂದ ರೊಚ್ಚಿಗೆದ್ದ ಕಾಂಗ್ರೆಸ್ ಅಹೋರಾತ್ರಿ ಧರಣಿ ಮಾಡಲು ನಿರ್ಧರಿಸಿತು. ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವ ಅವಿನಾಶ್ ಗೆಹ್ಲೋಟ್, ಬಜೆಟ್ ಅಧಿವೇಶನದಲ್ಲಿ ಇಂದಿರಾ ಗಾಂಧಿಯನ್ನು ಅಜ್ಜಿ ಎಂದು ಸಂಬೋಧಿಸಿದ ಹಿನ್ನೆಲೆಯಲ್ಲಿ ಈ ಕೋಲಾಹಲ ಆರಂಭವಾಯಿತು.


# ಬಿಬಿಸಿ ವರ್ಲ್ಡ್ ಸರ್ವೀಸ್ ಇಂಡಿಯಾಗೆ 3.44ಕೋಟಿರೂ ದಂಡ

ನವದೆಹಲಿ: ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ನಿಯಮಾವಳಿಗಳನ್ನು ಉಲ್ಲಂಘಿಸಿದ ಆರೋಪದಲ್ಲಿ ಬಿಬಿಸಿ ವರ್ಲ್ಡ್ ಸರ್ವಿಸ್ ಇಂಡಿಯಾಗೆ ಜಾರಿ ನಿರ್ದೇಶನಾಲಯವು 3.44 ಕೋಟಿ ರೂ.ಗೂ ಹೆಚ್ಚು ದಂಡವನ್ನು ವಿಧಿಸಿದೆ. ಬ್ರಿಟಿಷ್ ಬ್ರಾಡ್‌ಕಾಸ್ಟರ್‌ನ ಮೂವರು ನಿರ್ದೇಶಕರಿಗೆ, ಜಾರಿ ನಿರ್ದೇಶನಾಲಯವು ತಲಾ 1.14 ಕೋಟಿ ರೂ.ಗಿಂತ ಹೆಚ್ಚು ದಂಡ ವಿಧಿಸಿದೆ. ಆಗಸ್ಟ್ 4, 2023ರಂದು BBC WS ಇಂಡಿಯಾ, ಅದರ ಮೂವರು ನಿರ್ದೇಶಕರು ಮತ್ತು ಈ ಕಾನೂನಿನ ಅಡಿ ವಿವಿಧ ಉಲ್ಲಂಘನೆಗಳಿಗೆ ಸಂಬಂಧಿಸಿದಂತೆ ಹಣಕಾಸು ಮುಖ್ಯಸ್ಥರಿಗೆ ಶೋಕಾಸ್ ನೋಟಿಸ್ ನೀಡಿತ್ತು.




# ಮಾಜಿ ಸಂಸದ ಸಜ್ಜನ್‌ಕುಮಾರ್‌ಗೆ ಎರಡನೇ ಜೀವಾವಧಿ ಶಿಕ್ಷೆ

ನವದೆಹಲಿ : 1984ರ ಸಿಖ್ ವಿರೋಧಿ ದಂಗೆಯ ವೇಳೆ ಸರಸ್ವತಿ ವಿಹಾರ್ ಪ್ರದೇಶದಲ್ಲಿ ತಂದೆ-ಮಗನ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್‌ನ ಮಾಜಿ ಸಂಸದ ಸಜ್ಜನ್ ಕುಮಾರ್‌ಗೆ ದೆಹಲಿ ಕೋರ್ಟ್ ಜೀವಾವಧಿ



ಶಿಕ್ಷೆಯನ್ನು ಪ್ರಕಟಿಸಿತು. ಪ್ರಕರಣಕ್ಕೆ ಸಂಬಂಧಿಸಿದಂತೆ ಫೆ.21ರಂದು ನಡೆದಿದ್ದ ವಿಚಾರಣೆಯಲ್ಲಿ ಕಾಂಗ್ರೆಸ್‌ನ ಮಾಜಿ ನಾಯಕನನ್ನು ದೋಷಿ ಎಂದು ಘೋಷಿಸಿ, ತೀರ್ಪು ಕಾಯ್ದಿರಿಸಿದ್ದರು. ಆದರೆ ಕೋರ್ಟ್ ಜೀವಾವಧಿ ಶಿಕ್ಷೆ ವಿಧಿಸಿದೆ.




## ಮಹಾ ಶಿವರಾತ್ರಿಯಂದು 'ಪಿನಾಕ' ಪೋಸ್ಟರ್..



ಪ್ರತಿಷ್ಠಿತ ಪೀಪಲ್ ಮೀಡಿಯಾ ಫ್ಯಾಕ್ಟರಿ ಲಾಂಛನದಲ್ಲಿ ಟಿ.ಜಿ.ವಿಶ್ವ ಅವರು ನಿರ್ಮಿಸುತ್ತಿರುವ, ನೃತ್ಯ ನಿರ್ದೇಶಕರಾಗಿ ಜನಪ್ರಿಯರಾಗಿರುವ ಬಿ. ಧನಂಜಯ್ ಚೊಚ್ಚಲ ನಿರ್ದೇಶನದ ಗೋಲ್ಡನ್ ಸ್ಟಾರ್ ಗಣೇಶ್ ನಾಯಕನಾಗಿ ನಟಿಸುತ್ತಿರುವ ಬಹು ನಿರೀಕ್ಷಿತ "ಪಿನಾಕ" ಚಿತ್ರದ ಪೋಸ್ಟರ್ ಮಹಾ ಶಿವರಾತ್ರಿ ದಿನದಂದು ಬಿಡುಗಡೆಯಾಗಿದೆ. "ಪಿನಾಕ" ಚಿತ್ರದ ವಿಭಿನ್ನ ಪೋಸ್ಟರ್ ಬಿಡುಗಡೆ ಮಾಡುವ ಮೂಲಕ ಚಿತ್ರತಂಡ ರಾಜ್ಯದ ಜನತೆಗೆ ಚಿತ್ರತಂಡ ಮಹಾ ಶಿವರಾತ್ರಿ ಶುಭಾಶಯ ತಿಳಿಸಿದೆ. "ಪಿನಾಕ" ಎಂದರೆ ಶಿವನ ತ್ರಿಶೂಲ. ಈ ಚಿತ್ರದ ಶೀರ್ಷಿಕೆಯೂ ಹೌದು. ಗಣೇಶ್ ಅವರು ಸಹ ಈ ಚಿತ್ರದಲ್ಲಿ ಕ್ಷುದ್ರ ಹಾಗೂ ರುದ್ರ ಎಂಬ ಎರಡು ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಈಗಾಗಲೇ ಬಿಡುಗಡೆಯಾಗಿರುವ ಚಿತ್ರದ ಫಸ್ಟ್ ಲುಕ್ ಟೀಸರ್‌ಗೆ ಮಹಾಪೂರವೇ ಹರಿದು ಬಂದಿದೆ.

## ರವಿಚಂದ್ರನರ ಹೊಸ ಚಿತ್ರ 'ಪ್ಯಾರ್'..



ಎಸ್.ಎಂ. ಪ್ರೊಡಕ್ಷನ್ಸ್ ಲಾಂಛನದಲ್ಲಿ ಹೆಚ್. ಎಸ್. ನಾಗಶ್ರೀ ಅವರು ನಿರ್ಮಾಣ ಮಾಡುತ್ತಿರುವ ನೂತನ ಚಿತ್ರದ ಟೈಟಲ್ ಅನಾವರಣ ಸಮಾರಂಭ ನಡೆಯಿತು. ಈ ಚಿತ್ರದಲ್ಲಿ ಕ್ರೇಜಿ ಸ್ಟಾರ್ ರವಿಚಂದ್ರನ್ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ಅವರೇ 'ಪ್ಯಾರ್' ಎಂಬ ನೂತನ ಶೀರ್ಷಿಕೆಯನ್ನು ಲಾಂಚ್ ಮಾಡಿದರು. ಈ ಚಿತ್ರದಲ್ಲಿ ಭರತ್, ರಾಶಿಕಾ ಶೆಟ್ಟಿ ನಾಯಕ, ನಾಯಕಿಯಾಗಿ ಬಣ್ಣ ಹಚ್ಚಿದ್ದಾರೆ. ಈ ಚಿತ್ರಕ್ಕೆ ಎಸ್. ಸುಪ್ರೀತ್ ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳುತ್ತಿದ್ದಾರೆ. ನಟ ರವಿಚಂದ್ರನ್ ಮಾತನಾಡುತ್ತ ಇವರೆಲ್ಲ ನಮ್ಮ ಚಿತ್ರಕ್ಕೆ ನೀವೇ ಬೇಕು ಅಂತ ಹಠ ಹಿಡಿದರು. ಇವರ ಪ್ರೀತಿಗೆ ಸೋತು ನಾನಿಲ್ಲಿಗೆ ಬಂದಿದ್ದೇನೆ. ಪ್ರೀತಿಗೆ ಇರುವ ಬೆಲೆಯೇ ಬೇರೆ ಅಂತ ಚಿತ್ರದ ಮೂಲಕ ಹೇಳಹೊರಟಿದ್ದಾರೆ. ನಾನಿಲ್ಲಿ ನಾಯಕಿಯ ತಂದೆಯಾಗಿ ಕಾಣಿಸಿಕೊಳ್ಳುತ್ತಿದ್ದೇನೆ ಎಂದರು.

## ಮಾ.7ಕ್ಕೆ ಪ್ರಜ್ವಲ್ ದೇವರಾಜ್ 'ರಾಕ್ಷಸ' ಬಿಡುಗಡೆ..



ಶಾನ್ವಿ ಎಂಟರ್‌ಟೇನ್ಮೆಂಟ್ ಮೂಲಕ ದೀಪು ಬಿ.ಎಸ್ ನಿರ್ಮಿಸಿರುವ, ನವೀನ್ ಮತ್ತು ಮಾನಸಾ ಕೆ ಸಹ ನಿರ್ಮಾಣದಲ್ಲಿ ಮೂಡಿ ಬಂದಿರುವ ಸಿನಿಮಾ ರಾಕ್ಷಸ. ಎಲ್ಲವೂ ಅಂದುಕೊಂಡಂತೆ ಆಗಿದ್ದರೆ ಇವತ್ತು ಶಿವರಾತ್ರಿ ಹಬ್ಬದ ವಿಶೇಷವಾಗಿ ಚಿತ್ರ ತೆರೆಗೆ ಬರಬೇಕಿತ್ತು. ಆದರೆ ರಾಕ್ಷಸ ಬಿಡುಗಡೆ ದಿನಾಂಕ ಮುಂದೂಡಲಾಗಿದೆ. ಮಾರ್ಚ್ 7ಕ್ಕೆ ರಾಕ್ಷಸನಾಗಿ ಪ್ರಜ್ವಲ್ ದೇವರಾಜ್ ದರ್ಶನ ಕೊಡಲಿದ್ದಾರೆ. ಪ್ರತಿ ಸಿನಿಮಾಗಳಲ್ಲಿಯೂ ಭಿನ್ನ ವಿಭಿನ್ನ ಪಾತ್ರಗಳ ಮೂಲಕ ರಂಜಿಸುವ ಡೈನಾಮಿಕ್ ಪ್ರಿನ್ಸ್ ಪ್ರಜ್ವಲ್ ದೇವರಾಜರ ರಾಕ್ಷಸ ಚಿತ್ರ ಪ್ರೇಕ್ಷಕರ ಎದುರು ಬರಲು ಸಜ್ಜಾಗಿದೆ. ಬಹಳ ವಿಭಿನ್ನವಾದ ಪಾತ್ರದಲ್ಲಿ ಡೈನಾಮಿಕ್ ಪ್ರಿನ್ಸ್ ಕಾಣಿಸಿಕೊಂಡಿದ್ದಾರೆ. ಲೋಹಿತ್ ಎಚ್ ನಿರ್ದೇಶನದ ಈ ಚಿತ್ರದಲ್ಲಿ ಸೋನಲ್ ಮೊಂಥೆರೋ ನಾಯಕಿಯಾಗಿ ಅಭಿನಯಿಸಿದ್ದಾರೆ. ಶೋಭಾ ರಾಜ್, ವತ್ಸಲಾಮೋಹನ್, ಸಿದ್ಲಿಂಗು ಶ್ರೀಧರ್, ಆರ್ನ ರಾಥೋಡ್ ಹೀಗೆ ಇನ್ನು ಹಲವು ಕಲಾವಿದರು ತಾರಾಬಳಗದಲ್ಲಿದ್ದಾರೆ.

## ಮಾರ್ಚ್ 7ಕ್ಕೆ ಕನಸೊಂದು ಶುರುವಾಗಿದೆ..

ಸಹಾರಾ ಸಿನಿಮಾ ಮೂಲಕ ಚಂದವನಕ್ಕೆ ಹೆಜ್ಜೆ ಇಟ್ಟಿದ್ದ ನಿರ್ದೇಶಕ ಮಂಜೇಶ್ ಈಗ ಕನಸೊಂದು ಶುರುವಾಗಿದೆ ಚಿತ್ರದ ಮೂಲಕ ಸಸ್ಪೆನ್ಸ್ ಥ್ರಿಲ್ಲರ್ ಕಥೆ ಹೇಳಲು ರೆಡಿಯಾಗಿದ್ದಾರೆ. ಮಾರ್ಚ್7ರಂದು ತೆರೆಗೆ ಬರುತ್ತಿರುವ ಈ ಚಿತ್ರದ ಟ್ರೇಲರ್ ರಿಲೀಸ್ ಆಗಿದೆ. ಬೆಂಗಳೂರಿನ ಎಂಎಂಬಿ ಲೆಗಸಿಯಲ್ಲಿ ಟ್ರೇಲರ್ ಬಿಡುಗಡೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ನಟರಾದ ಡಾರ್ಲಿಂಗ್ ಕೃಷ್ಣ, ಲೂಸ್ ಮಾದಯೋಗಿ, ಸಾಹಸ ನಿರ್ದೇಶಕ ಥ್ರಿಲರ್ ಮಂಜು ಸೇರಿದಂತೆ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗಿಯಾಗಿ ಹೊಸ ತಂಡಕ್ಕೆ ಸಾಥ್ ಕೊಟ್ಟರು. ಮಾರ್ಚ್ 7ಕ್ಕೆ ಸಿನಿಮಾ ತೆರೆಗೆ ಬರುತ್ತಿದೆ. ಚಿತ್ರ ಮಂದಿರಗಳಲ್ಲಿಯೇ ಕನಸೊಂದು ಶುರುವಾಗಿದೆ ಸಿನಿಮಾವನ್ನು ನೋಡಿ ಹಾರೈಸಿ, ನಿರ್ದೇಶಕರಿಗೂ ನಿರ್ಮಾಪಕರಿಗೂ ಒಳ್ಳೇದಾಗಲಿ ಎಂದು ಕಾರ್ಯಕ್ರಮಕ್ಕೆ ಆಗಮಿಸಿದ ಗಣ್ಯರು ತಿಳಿಸಿದರು.









Edited, Published, Printed by Lalita Kumari (Lalithasri Preetham Rai) Shop N0: 6, Lingamma Towers. Opp. Pandeshwar police station, Pandeshwar Mangaluru 575001. Dakshina Kannada.
All Rights Reserved RNI Ref: 1327299/KARKAN26532. Printed @ N R K Media World, No-10, 'A' 1st floor, 4th cross, 4th main, Gandhinagar Bengaluru-560009. email: karavalitharangini@gmail.com PH: +91 9880109212